

ಚಾಣಕ್ಯ ವಿಶ್ವವಿದ್ಯಾಲಯ

ಆದರ್ಶದ ನೆಲೆಯಲ್ಲಿ • ಔನ್ನತ್ಯದೆಡೆಗೆ

ತಂಬಿಲರು

ತ್ರೈಮಾಸಿಕ ಪತ್ರಿಕೆ - ವೈಶಾಖ ಮಾಸದ ಶುಕ್ಲ ಪಕ್ಷ ವಿಶ್ವವಸು ಸಂವತ್ಸರ- ೨೦೨೫





ಡಾ. ಎಸ್ ಎಲ್ ಭೈರಪ್ಪ

ಸಂಚಿಕೆ
೦೩

ತಂಬಿಲರು

ಸಂಪಾದಕೀಯ ಬಳಗ

ಮಾರ್ಗದರ್ಶನ
ಕೇಶವಚಂದ್ರ

ಮುಖಪುಟ ವಿನ್ಯಾಸ
ಅನಿಲ್ ಕುಮಾರ್

ಶೀರ್ಷಿಕೆ ವಿನ್ಯಾಸ
ಮಂಜುಪ್ರಸಾದ್

ಸಂಪಾದಕರು
ಶರಣ್ಯ
ಶಮಿತಾ
ಅನ್ವಿತ ಡಿ ಎನ್
ಸುಶ್ಮಿತಾ ಬಿ ಆರ್

ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ
ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ|
ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಂದ ಶಾಸ್ತ್ರಿತನದಿಂದಲ್ಲ-
ಮಂಕುತಿಮ್ಮ||೬೫||

ಪುಸ್ತಕಗಳನ್ನು ಓದಿ ಪಡೆದುಕೊಂಡ ಪಾಂಡಿತ್ಯ ತಲೆಯಮೇಲೆ ತಂದಿಟ್ಟುಕೊಂಡಂತ ಕಿರೀಟದಲ್ಲಿನ ಮಣಿಯಂತೆ. ಆದರೆ ನಮ್ಮ ಅನುಭವಗಳನ್ನು ವಿಚಾರದ ಒರೆಗೆ ಹಚ್ಚಿ ನಮ್ಮ ಚಿತ್ತದಲ್ಲಿ ನಮಗೆ ಸ್ಫುರಿಸಿದ ಜ್ಞಾನ, ತನ್ನ ಸ್ವಾಭಾವಿಕ ಗುಣಕ್ಕೆ, ಮಣ್ಣಿನ ಸಾರ, ಪರಿಸರದ ಪ್ರಭಾವದಿಂದ ತನ್ನೊಳಗಿಂದಲೇ ವಿಕಸಿತವಾಗುವ ಒಂದು ಗಿಡದ " ಪುಷ್ಪದಂತೆ" ಎನ್ನುತಾರೆ, ಮಾನ್ಯ ಗುಂಡಪ್ಪನವರು.



ಪರಿವಿಡಿ

ಪುಟ ಸಂಖ್ಯೆ

೧ ಕಥೆ

ಬೈನಾಕ್ಯುಲರ್ - ಅನಿ ಕೆ ಪಿ, ದ್ವಿತೀಯ ವರ್ಷದ ಬಿ. ಕಾಮ್..... ೩

೨ ಪುಸ್ತಕಗಳಿಂದ ನಾ ಕಂಡ ಜಗತ್ತು

ರುದ್ರ ಪ್ರಯಾಗದ ಭಯಾನಕ ನರಭಕ್ಷಕ - ಅನ್ವಿತ ಡಿ.ಎನ್. ತೃತೀಯ ವರ್ಷದ ಬಿಎ..... ೪

೩ ಕವನ

ಬೆಚ್ಚಗಿನ ಗೂಡಲ್ಲಿ..... **ಸಹನಾ ತೊಂಡಿಕಟ್ಟಿ,** ನಾಲ್ಕನೇ ವರ್ಷದ ಬಿ.ಸಿ.ಎ.....೪

೪ ಅನುಭವ

ಪ್ರವಾಸಿ ಕಥನ- ಕೊಡಚಾದ್ರಿ - ಪಲ್ಗುಣಿ ಆರ್ ಶೆಣೈ, ತೃತೀಯ ವರ್ಷದ ಬಿಎ..... ೫

೫ ಲೇಖನ

ದೇಸಿ ಮತ್ತು ಜರ್ಸಿ ಹಸು-
ಹಾಲಿನ ಲೋಕದ ಎರಡು ರೂಪಗಳು - ಹರ್ಷಿತಾ ಎಮ್,
ದ್ವಿತೀಯ ವರ್ಷದ ಬಿ.ಕಾಮ್.....೬

ಬಿದಿರು - ಉಷಾ ಸಿ ಚಕ್ರಸಾಲಿ, ಪ್ರಥಮ ವರ್ಷ ಬಿ. ಎ. ೭

ಯಾಣದ ಕಡೆಗೆ ಯಾನ - ರಕ್ಷಿತಾ ದ್ವಿತೀಯ ವರ್ಷದ ಬಿ. ಕಾಮ್.....೧೦

ಸಮಯ: ನಿಮ್ಮ ಅತ್ಯಂತ ಅಮೂಲ್ಯ ಸಂಪತ್ತು - ಧನಶ್ರೀ, ಮೌಲ್ಯಮಾಪನ ವಿಭಾಗ.....೮

ಶ್ರೀಮಂತರಾಗಲು ಸುಲಭ ಮಾರ್ಗಗಳು! - ಚೇತನ್ ಎಸ್, ಸಂಶೋಧನಾ ವಿದ್ಯಾರ್ಥಿ..... ೮-೯

ನನ್ನ ಭವಿಷ್ಯದ ಬಗ್ಗೆ ತಂದೆಯ ಮಾತು - ರಕ್ಷಿತಾ ಯು ಎನ್, ಪ್ರಥಮ ವರ್ಷ ಬಿ. ಎ. ೫

೬ ಎಲೆ ಮರೆಯ ಕಾಯಿ

ತಿಮ್ಮಣ್ಣಗೌಡ: ಕರ್ನಾಟಕದ ವೀರ,
ದೇಶಭಕ್ತರ ಹೃದಯ ಗರ್ಜನೆ - ಸುಜ್ಞಾನ ಮೂರ್ತಿ.ಜಿ ಎಂ, ೪ನೇ ವರ್ಷ, ಬಿಸಿಎ.....೭

೭ ಷಟ್ಪದಿ

ಕುಳಿತರೇಕೆನುವ..... **-ಕೇಶವ ಚಂದ್ರ,** ಸಹಾಯಕ ಪ್ರಾಧ್ಯಾಪಕರು.....೯

೮ ಸ್ಥಳ ಪರಿಚಯ

ಯಾಣದ ಕಡೆಗೆ ಯಾನ. - ರಕ್ಷಿತಾ, ದ್ವಿತೀಯ ವರ್ಷದ ಬಿ. ಕಾಮ್.....೧೦

೯ ವ್ಯಕ್ತಿ ಪರಿಚಯ

ಭೈರಪ್ಪನೆಂಬ ತಪಸ್ವಿ ಹೇಳಿಕೊಟ್ಟ ತಪಸ್ಸು - ಹೆದ್ದಾರಿ ರವಿಕುಮಾರ್,
ಸಹಾಯಕ ಪ್ರಾಧ್ಯಾಪಕರು.....೧೦

೧೦ ಅಂತರಂಗ ಸಮೀಕ್ಷೆ. - ಕುಸುಮ ಸಿ ಎಮ್, ತೃತೀಯ ಬಿ.ಎ.....೧೧


೧೧ ಪದಗಳಂಗಳ. - ಸುಶ್ಮಿತಾ ಬಿ. ಆರ್, ತೃತೀಯ ಬಿ.ಎ.....೧೧

೧೨ ಮಾಯಾಚೌಕ. - ರಕ್ಷಿತಾ, ದ್ವಿತೀಯ ಬಿ.ಕಾಂ.....೧೨

೧೩ ಕಲಾಮಂಜರಿ..... ೧೨

ಬೈನಾಕ್ಯುಲರ್!..

ಟಕ್ ..ಟಕ್..... ಟಕ್ .....ಟಕ್ ..ಎಂದು ನಿರಂತರವಾಗಿ ಸ್ವಾತಿಯ ಮನೆ ಬಾಗಿಲು ಸದ್ದಾಗುತ್ತಿತ್ತು. ಆದರೆ ಯಾರೂ ಸಹ ಬಂದು ಬಾಗಿಲು ತೆಗೆಯಲಿಲ್ಲ. ಆ ಸದ್ದು ಕೇಳಿದ ಅವಳ ಪಕ್ಕದ ಮನೆಯ ರಮೇಶನು ಯೋಚಿಸುತ್ತಾನೆ, "ಯಾರ್ ಇರಬಹುದು ಈ ತರ ಸ್ವಾತಿ ಮನೆ ಬಾಗಿಲು ಬಡಿತಾ ಇದರಲ್ಲ, ಈ ಸ್ವಾತಿ ಎಲ್ಲಿ ಹೋದ್ಲು ಅಂತ ಹೇಳಿ ಹೊರಗಡೆ ಬಂದು ನೋಡ್ತಾನೆ,. ಒಮ್ಮೆ ಗಾಬರಿ ಆದರೂ ಸಹ ಸಮಾಧಾನದಿಂದಲೇ "ಏನ್ ಸಾಹೇಬ್ರೆ ನೀವು ಈ ಕಡೆ ?, ಏನಾದರೂ ಕೆಲಸ ಇತ್ತಾ ಹೇಗೆ"? ಎಂದು ಕೇಳುತ್ತಾನೆ. ಏಕೆಂದರೆ ಅಲ್ಲಿ ಬಂದಿದ್ದದ್ದು ಪೊಲೀಸರು ಆಗಿರುತ್ತಾರೆ. ಅವರೂ ಸಹ ಒಲ್ಲದ ಮನಸ್ಸಿನಲ್ಲಿ ಕೆಲಸ ಮಾಡುವವರ ರೀತಿಯಲ್ಲಿ ಬಹಳ ಅಸಡ್ಡೆಯಿಂದ ಮಾತಾಡ್ತಾರೆ. "ಏನಿಲ್ಲ ಕಣಪ್ಪ ಹೀಗೆ 2 ಗಂಟೆ ಹಿಂದೆ ಸ್ಟೇಷನ್ ಗೆ ಒಂದು ಕರೆ ಬಂದಿತ್ತು. ಅದು ಒಬ್ಬ ಹುಡುಗ ಮಾಡಿದ್ದು ,ಅವನು ನಮಗೆ ಈ ಮನೆ ವಿಳಾಸ ಕೊಟ್ಟು ಇಲ್ಲಿ ಒಬ್ಬಳು ಹುಡುಗಿ ಆತ್ಮಹತ್ಯೆ ಮಾಡಿಕೊಳ್ಳೋಕೆ ಪ್ರಯತ್ನ ಪಡ್ತಾ ಇದಾಳೆ, ದಯವಿಟ್ಟು ಅವಳನ್ನ ಕಾಪಾಡಿ... ಆದಷ್ಟು ಬೇಗ ಹೋಗಿ ಕಾಪಾಡಿ" ಅಂತ ತುಂಬಾ ಗಾಬರಿಯಿಂದ ಹೇಳಿದ, ಅವನು ಯಾರು ಅಂತ ಕೇಳಿದ್ದಕ್ಕೆ ಫೋನ್ ಕಟ್ ಮಾಡ್ದ. ಆದ್ರೂ ನನಗೆ ಅನ್ನೋದು ಈ ಹುಡ್ಗ ಹುಡ್ಗೀರು ನಮ್ಮನ್ನ ಏನಂತ ಅನ್ಕೊಂಡಿದ್ದಾರೆ, ನಾವೇನ್ ಅವ್ರ್ ಕಣ್ಣಿಗೆ ಜೋಕರ್ ಗಳ ತರಹ ಕಾಣಿಸ್ತಿವೆ ... ಅವ್ನ ಹೆದ್ರುಸೋಕೆ ಅವಳು ಆತ್ಮಹತ್ಯೆ ಮಾಡ್ಕೋತೀನಿ ಅನ್ನೋದು, ಅವಳನ್ನ ಹೆದ್ರುಸೋಕೆ ಅವ್ನ್ ಹೇಳೋದು ಜೊತೆಗೆ ನಮ್ಗೆ ಫೋನ್ ಮಾಡಿ ಕಾಪಾಡಿ ಸಾರ್.... ಅನ್ನೋದು ,ದಿನ ಇದೆ ಆಗಿದೆ. ಪ್ರತಿ ದಿನ ಒಂದಲ್ಲ ಒಂದು ಫೋನ್ ಬರ್ತಾನೆ ಇರುತ್ತೆ, ಈ ತರ ಎಂದು ಬಹಳ ಸಿಟ್ಟಿನಲ್ಲಿ ಮಾತಾಡ್ತಾರೆ. ಆಗ ರಮೇಶನು ಗಾಬರಿಗೊಂಡು "ಅಯ್ಯೋ ಸರ್ ನೀವು ಇತರ ಫೋನ್ ಬಂದಿದೆ ಅಂತೀರಾ ಮತ್ತೆ ಇವ್ಳು ಬೇರೆ ಬಾಗಿಲು ತೆಗಿತಾ ಇಲ್ಲ, ನನಗೆ ಗಾಬರಿ ಆಗ್ತಾ ಇದೆ, ಒಳಗೆ ಏನಾಗಿದೆ ನೋಡೋಣ ಬನ್ನಿ" ಅಂತಾನೆ. ಆಗ ಪೊಲೀಸರು ಸರಿ ಎಂದು ಜೋರಾಗಿ ಬಾಗಿಲು ತಳ್ಳಿ ಒಳಗೆ ಹೋಗ್ತಾರೆ. ರಮೇಶ್ ನಿಧಾನವಾಗಿ ಸ್ವಾತಿ ರೂಮಿನ ಬಾಗಿಲನ್ನು ತಳ್ಳುತ್ತಾನೆ ಒಳಗೆ ನೋಡಿದವನೇ ಸಾರ್ ..ಇಲ್ನೋಡಿ ಸಾರ್ ಎಂದು ಕಿರುಚುತ್ತಾನೆ. ಓಡಿ ಬಂದ ಪೊಲೀಸರಿಗೂ ಆಶ್ಚರ್ಯ. ಸ್ವಾತಿ ಶವವಾಗಿ ಪತ್ತೆಯಾಗುತ್ತಾಳೆ.....! ಆ ರೂಮಿನಲ್ಲಿದ್ದ ಫ್ಯಾನಿಗೆ ತನ್ನ ಸೀರೆಯೊಂದನ್ನು ಬಿಗಿದು ನೇಣು ಹಾಕಿಕೊಂಡಿದ್ದಾಳೆ. ತಕ್ಷಣ ಪೊಲೀಸರು ಆಂಬುಲೆನ್ಸ್ ಕರೆಸಿ ಹೆಣವನ್ನು ಮರಣೋತ್ತರ ಪರೀಕ್ಷೆಗೆ ಕಳಿಸುತ್ತಾರೆ ಹಾಗೂ ಆ ಮನೆಯನ್ನು ಜಪ್ತಿ ಮಾಡಿ ಅಲ್ಲಿ ದೊರೆಯಬಹುದಾದ ಸಾಕ್ಷಿಗಳನ್ನು ಸಂಗ್ರಹಿಸಿ ಅಲ್ಲಿಂದ ಹೊರಡುತ್ತಾರೆ. ಆದರೆ ಪೊಲೀಸರಿಗೆ ಇದು ಆತ್ಮಹತ್ಯೆಯೋ, ಕೊಲೆಯೋ ಎಂಬ ಅನುಮಾನ. ಮೇಲ್ನೋಟಕ್ಕೆ ಆತ್ಮಹತ್ಯೆಯಂತಿದ್ದರೂ, ಅವಳು ಆತ್ಮಹತ್ಯೆ ಮಾಡಿಕೊಳ್ಳುವ ವಿಷಯವನ್ನು ಒಬ್ಬ ಹುಡುಗ ಕರೆ ಮಾಡಿ ಹೇಳಿರುವುದಾಗಿರುತ್ತದೆ. ಆ ಹುಡುಗ ಯಾರು? ಇವಳು ಸಾಯುವ ವಿಚಾರ ಅವನಿಗೆ ಹೇಗೆ ತಿಳಿಯಿತು? ಸ್ವಾತಿ ಅವನಿಗೆ ಹೇಗೆ ಪರಿಚಯ, ಅವನೇ ಇವಳನ್ನು ಸಾಯಿಸಿರಬಹುದಾ?



ಹೀಗೆ ಹತ್ತು ಹಲವು ಪ್ರಶ್ನೆಗಳು ಪೊಲೀಸರನ್ನು ಕಾಡಲು ಶುರು ಮಾಡಿದ್ದವು. ಇದೇ ಗೊಂದಲಗಳೊಂದಿಗೆ ಪೊಲೀಸರು ತಮ್ಮ ತನಿಖೆ ಶುರು ಮಾಡಿದರು. ಈ ಕೇಸಲ್ಲಿ ಈಗ ಮುಖ್ಯ ಸಾಕ್ಷಿ ಆ ಅಪರಿಚಿತ ಹುಡುಗ. ಅವನನ್ನು ಹುಡುಕಲು ಅವರಿಗೆ ಇದ್ದದ್ದು ಒಂದೇ ದಾರಿ. ಅದು ಅವನ ಫೋನ್ ನಂಬರ್ ಟ್ರೇಸ್ ಮಾಡುವುದು. ಅವರು ಹಾಗೆ ಮಾಡಿದಾಗ ತಿಳಿದದ್ದು ಏನೆಂದರೆ ಅವನು ಬೇರೆ ಯಾರೂ ಅಲ್ಲ ಸ್ವಾತಿ ಮನೆಯ ಹಿಂದಿನ ಮನೆಯವನು. ಈ ವಿಚಾರ ತಿಳಿದು ಕೂಡಲೇ ಪೊಲೀಸರು ಅವನನ್ನು ವಿಚಾರಣೆ ಮಾಡಲು ಸ್ಟೇಷನ್ ಗೆ ಕರೆಸುತ್ತಾರೆ. ಗಾಬರಿಯಿಂದಲೇ ಸ್ಟೇಷನ್ ಗೆ ಬಂದ ಹುಡುಗ ಪೊಲೀಸರ ಪ್ರತಿ ಪ್ರಶ್ನೆಗೂ, ನನಗೆ ಏನು ಗೊತ್ತಿಲ್ಲ.... ನಾನೇನೂ ಮಾಡಿಲ್ಲ... ಎಂದು ನಡಗುತ್ತಲೇ ಉತ್ತರಿಸುತ್ತಿರುತ್ತಾನೆ. ನಂತರ ಪೊಲೀಸರು ಸಮಾಧಾನ ಮಾಡಿಕೋ ನಾವು ನಿನಗೆ ಏನು ಮಾಡುವುದಿಲ್ಲ ಸತ್ಯ ಹೇಳು ಎನ್ನುತ್ತಾರೆ. ಅದಕ್ಕೆ ಆ ಹುಡುಗ ಸ್ವಲ್ಪ ಹಿಂಜರಿಕೆಯಲ್ಲೇ ತಡವರಿಸುತ್ತಾ, ಗೊತ್ತಿಲ್ಲ ಸರ್, ನಾನು ಎಂದಿನಂತೆ ನನ್ನ ಬೈನಾಕ್ಯುಲರಲ್ಲಿ ಸುತ್ತಮುತ್ತ ನೋಡುತ್ತಿರುವಾಗ ಆ ಹುಡುಗಿಯ ಮನೆ ಕಂಡಿತು. ಆ ಸಮಯದಲ್ಲಿ ಬದಲಾಯಿಸುತ್ತಿದ್ದಳು, ನಾನು ಕುತೂಹಲದಿಂದ ನೋಡ್ತಾ ಉಳಿದೆ. ಅಷ್ಟು ಹೊತ್ತಿಗೆ ಯಾರೋ ಅವಳ ಮನೆ ಬಾಗಿಲು ಬಡಿದರೆಂದು ಕಾಣುತ್ತಾದೆ ಯಾರು ಎಂದು ನನಗೆ ಕಾಣ್ಸಿಲ್ಲ, ಅಲ್ಲಿ ಅವಳು ಮಾತ್ರ ಕಾಣಿಸ್ತಿದ್ಲು. ಹಾಗಾಗಿ ಅವಳು ಮಾತನಾಡುವುದು ಗೊತ್ತಾಯಿತು ಅದಕ್ಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾಳೆ ಅಂತ ನಿಮಗೆ ಕರೆ ಮಾಡಿದ್ದು ಸರ್ ಎಂದನು. ಅದಕ್ಕೆ ಪೊಲೀಸರು "ಅಲ್ಲಪ್ಪ ಅವರ ಮನೆಯಲ್ಲಿ ಮಾತಾಡಿದ್ದು ನಿನಗೆ ಹೇಗೆ ಕೇಳಿಸ್ತು? ನಿಮ್ಮ ಮನೆ ಅವರ ಮನೆಯಿಂದ ದೂರ ಅಲ್ವಾ!" ಎನ್ನುತ್ತಾರೆ. "ದೂರನೇ ಸರ್, ಆದರೆ ನನಗೆ ಲಿಪ್ ರೀಡ್ ಮಾಡಕ್ಕೆ ಬರುತ್ತೆ ಹಾಗೂ ಮನೆ ದೂರ ಇದ್ದರು ಸಹ ನಾನು ಬೈನಾಕ್ಯುಲರ್ ನಿಂದ ಅವಳನ್ನು ನೋಡಿದ್ದು ಅಲ್ವಾ, ಹಾಗಾಗಿ ಅವಳು ಏನು ಮಾತಾಡ್ತಾ ಇದ್ಲು ಎಂದು ನನಗೆ ಗೊತ್ತಾಯ್ತು" ಎಂದು ಹುಡುಗ ಹೇಳುತ್ತಾನೆ. ಅದಕ್ಕೆ ಶಂಕರ್ ಸರಿ ಹಾಗಿದ್ರೆ ಅವಳು ಸಾಯೋ ಮುಂಚೆ ಏನ್ ಮಾತಾಡಿದ್ಳು? ಎನ್ನುತ್ತಾನೆ. ಹೇಳ್ತೀನಿ; ಅವಳು ಮಧ್ಯಾಹ್ನ ಸುಮಾರು ಎರಡು ಗಂಟೆ ಅಷ್ಟೊತ್ತಿಗೆ ಕೆಲಸ ಮುಗಿಸಿ ಬಂದಿದ್ಲು ಅನ್ಸುತ್ತೆ. ಆ ಸಮಯದಲ್ಲಿ ಆ ವ್ಯಕ್ತಿ ಬಂದ, ಅವನು ಬಂದ ತಕ್ಷಣ ಅವಳು ತುಂಬಾ ಗಾಬರಿಯಿಂದ ಸಿಟ್ಟಿನಿಂದ ಮಾತಾಡಕ್ಕೆ ಶುರು ಮಾಡಿದ್ಲು. ಅವಳು ಹೇಳಿದ್ದು ಇಷ್ಟೆ, "ನೀನ್ಯಾಕೆ ಇಲ್ಲಿ ಬಂದೆ ಹೋಗು ಇಲ್ಲಿಂದ ನಿನ್ನಿಂದ ನಾನು ಅನುಭವಿಸಿರುವುದೇ ಸಾಕು, ನೀನು ಹೀಗೆ ತೊಂದರೆ ಕೊಡ್ತಾ ಇದ್ರೆ ನಾನು ನೇಣು ಹಾಕ್ಕೊಂಡು ಸತ್ತೋಗ್ತೀನಿ ಅಷ್ಟೇ" ಅಂತ ಹೇಳಿ ಜೋರಾಗಿ ಬಾಗಿಲು ಹಾಕಿ ಅವಳ ಸೀರೆನ ಫ್ಯಾನಿಗೆ ಹಾಕೋದು ನೋಡಿದೆ, ಆಮೇಲೆ ನಿಮಗೆ ಕರೆ ಮಾಡೂ ಆತಂಕದಲ್ಲಿ ಮುಂದೇನಾಯ್ತೋ ನೋಡಲಿಲ್ಲ. ಅನಂತರ ನೋಡುವಾಗ ಅವಳ ಮನೆ ಕಿಟಕಿ ಕೂಡ ಮುಚ್ಚಿತ್ತು". ಎಂದು ಹೇಳುತ್ತಾನೆ." ಸರಿ ಹಾಗಿದ್ರೆ ನೀನಿನ್ನು ಹೊರಡು" ಅಂತ ರಘುವನ್ನು ಕಳಿಸುತ್ತಾ. "ನಮಗೆ ಹೇಳದೆ ಎಲ್ಲೂ ಹೋಗಬಾರದು, ಹೇಳಿಕಳಿಸಿದಾಗೆಲ್ಲ ಬರಬೇಕು " ಎಂದು ಎಚ್ಚರಿಸುತ್ತಾರೆ. ಆತ ತಲೆಯಾಡಿಸಿ ಸಾಗ್ತಾನೆ. ಅವನು ಹೋದ ನಂತರ ಶಂಕರ್ ಆಲೋಚಿಸತೊಡಗುತ್ತಾನೆ. ಅವಳ ಮನೆಯ ಬಾಗಿಲು ಬಡಿದವರ್ಯಾರು. ಅವಳ ಪ್ರೇಮಿಯೇ, ವೈರಿಯೇ ,ಸಂಬಂಧಿಯೇ, ಸ್ನೇಹಿತರೇ, ಯಾರು? ಇದು ಆತ್ಮಹತ್ಯೆಯೋ ಅಥವಾ ಕೊಲೆಯೋ?

ಪೊಲೀಸರ ಸಂದೇಹ ಹೆಚ್ಚಾಗಿ ರಘುವಿನ ಮೇಲೆ ಇದ್ದಿದ್ರಿಂದ ಅವನ ಬಗ್ಗೆ ಮಾಹಿತಿ ಹುಡುಕಲು ಆರಂಭಿಸುತ್ತಾರೆ, ಅವನ ಅಕ್ಕ- ಪಕ್ಕದ ಮನೆಯವರು ಹೇಳಿರೊ ಪ್ರಕಾರ ಅವ್ನ ಹೆಸರು ರಘು, ಊರು ಮಂಡ್ಯ ಹತ್ತಿರ ಮಲ್ಲಿಗೆ ಪುರ, ಆದರೆ ಈಗ ಅವನು ಅಲ್ಲಿ ಹೋಗಲ್ಲ ಏಕೆಂದ್ರೆ ಚಿಕ್ಕ ವಯಸ್ಸಲ್ಲೇ ಅವನ ತಂದೆ ತಾಯಿ ಕಾರ್ ಆಕ್ಸಿಡೆಂಟ್ ನಲ್ಲಿ ತೀರಿಕೊಂಡಿದ್ದರು ಅಂದಿನಿಂದ ಅವನು ಇದೇ ಮನೆಯಲ್ಲಿ ತನ್ನ ಅಜ್ಜಿ ಜೊತೆ ಇದ್ದಾನೆ ಈಗ ಅವರು ಇಲ್ಲ.

ಯಾವಾಗಲೂ ತನ್ನ ಬೈನಕೂಲರ್ ಹಿಡ್ಕೊಂಡು ಹೊರಗೆ ನೋಡ್ತಾ ಇರ್ತಾನೆ. ಅದು ಅವನ ಅಪ್ಪ ಅಮ್ಮನ ನೆನಪು ಅಂತ ಹೇಳಿದ್ದ ಹಾಗೂ ತುಂಬಾ ಒಳ್ಳೆ ಹುಡುಗ ಸರ್ ಯಾರ ತಂಟೆಗೂ ಹೋಗಲ್ಲ ಅಂತ ಹೇಳ್ತಾರೆ. ಅದೇ ಸಮಯಕ್ಕೆ ಶಂಕರ್ ಗೆ ಒಂದು ಫೋನ್ ಕರೆ ಬರುತ್ತೆ, ಅದರಲ್ಲಿ ಸ್ಟೇಷನ್ ಹೆಡ್ ಕಾನ್ಸ್ಟೇಬಲ್ ರಾಮಣ್ಣನವರು "ಸರ್ ಪೋಸ್ಟ್ ಮಾರ್ಟಂ ರಿಪೋರ್ಟ್ ಬಂದಿದೆ ಅದರಲ್ಲಿ ಸ್ವಾತಿ ಅವರು ಆತ್ಮಹತ್ಯೆ ಮಾಡಿಕೊಂಡು ಸತ್ತಿದ್ದು ಎಂದು ಬಂದಿದೆ" ಎಂದು ಹೇಳುತ್ತಾರೆ. ಅಷ್ಟೆಲ್ಲ ಕೇಳಿದ ಮೇಲು ಶಂಕರ್ ಗೆ ರಘುವಿನ ಮೇಲೆ ಅನುಮಾನ ಇರುತ್ತದೆ. ಏಕೆಂದರೆ ಅವನು ಹೇಳಿದ್ದು ಯಾವುದೂ ನಂಬುವಂತಹ ವಿಷಯವಾಗಿರಲಿಲ್ಲ.

ಅದೇ ಸಮಯಕ್ಕೆ ಅವ್ರಿಗೆ ಆ ದಿನ ಮನೆಗೆ ಬಂದ ವ್ಯಕ್ತಿ ಯಾರಿರಬಹುದು ಎಂದು ಗೊತ್ತಾಗಲಿಲ್ಲವಲ್ಲ, ಅವನೇ ಏನಾದ್ರು ಕೊಲೆ ಮಾಡಿರಬಹುದು ಎಂಬ ಯೋಚನೆ ಸಹ ಬರುತ್ತೆ. ಮರುದಿನ ಸ್ವಾತಿಯ ಮನೆಗೆ ಹೋಗಿ ಅಲ್ಲಿ ಯಾವುದಾದ್ರೂ CCTV ಯಲ್ಲಿ ಅವನು ಕಾಣಬಹುದೇ ಎಂದು ಪರಿಶೀಲಿಸುತ್ತಾರೆ. ಆದರೆ ಮನೆ ಎದುರುಗಡೆ ಇರುವ CCTV ಯಲ್ಲಿ ಆ ಸಮಯದಲ್ಲಿ ಅಥವಾ ಅದಕ್ಕಿಂತ ಮುಂಚೆ ಯಾರೂ ಪಾಸ್ ಆಗಿದ್ದು ಕಾಣಲಿಲ್ಲ ಹಾಗೂ ಅಕ್ಕ-ಪಕ್ಕದ ಮನೆಯವರು ಸಹ ಗೊತ್ತಿಲ್ಲ ಎಂದು ಹೇಳುತ್ತಾರೆ. ರಮೇಶನಿಗೆ ಗೊತ್ತಿರಬಹುದು ಎಂದು ಅವನನ್ನು ವಿಚಾರಿಸಿದ್ರು. ಅವನೂ ಸಹ "ಆ ದಿನ ಯಾರೂ ಬಂದ ಹಾಗೆ ಇಲ್ಲ ಸರ್, ಯಾಕಂದ್ರೆ ಅವಳ ಮನೆಗೆ ಯಾರ್ ಬಂದ್ರೂ ನನಗೆ ಗೊತ್ತಾಗುತ್ತೆ. ನಾನು ಹೊರಗೆ ಹೋಗಿ ನೋಡ್ತೀನಿ, ನನಗೇನೋ ಕರೆ ಮಾಡಿದ ಹುಡುಗ ರಘುನೇ ಅವಳನ್ನು ಸಾಯಿಸಿ ತಪ್ಪಿಸಿಕೊಳ್ಳಲು ಈ ತರ ನಾಟಕ ಮಾಡುತ್ತಿದ್ದಾನೆ ಅನಿಸುತ್ತೆ" ಎನ್ನುತ್ತಾನೆ....


ಮುಂದುವರೆಯುತ್ತದೆ.....

ಅನಿ ಕೆ ಪಿ
ದ್ವಿತೀಯ ವರ್ಷದ ಬಿ. ಕಾಮ್

ಪುಸ್ತಕಗಳಿಂದ ನಾ ಕಂಡ ಜಗತ್ತು

'ರುದ್ರ ಪ್ರಯಾಗದ ಭಯಾನಕ ನರಭಕ್ಷಕ'

ಇದು ಜಿಮ್ ಕಾರ್ಬೆಟ್ ರವರ ಕೃತಿಯಾಗಿದ್ದು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಸರಳವಾಗಿ ಮತ್ತು ಅದ್ಭುತವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. 'ನರಭಕ್ಷಕ' ಎಂದು ಕೇಳಿದರೆ ಸಾಮಾನ್ಯವಾಗಿ ಹುಲಿ, ಸಿಂಹಗಳು ನೆನಪಾಗುತ್ತವೆ. ಆದರೆ ಇಲ್ಲಿ ನರಭಕ್ಷಕನಾಗಿದ್ದು ಒಂದು ವಯಸ್ಸಾದ ಚಿರತೆ! ಈ ಕಾದಂಬರಿಯು ೧೯೧೮ ರಿಂದ ೧೯೨೬ರ ಕಾಲಾವಧಿಯಲ್ಲಿ ಉತ್ತರಾಖಂಡದ ಘರ್ವಾಲಿನ ರುದ್ರಪ್ರಯಾಗ್ ಎಂಬ ಪ್ರದೇಶದಲ್ಲಿ ನಡೆದ ಭಯಾನಕ ಘಟನೆಗಳನ್ನು ಒಳಗೊಂಡಿದೆ. ರುದ್ರ ಪ್ರಯಾಗದ ಭಯಾನಕ ನರಭಕ್ಷಕ ತನ್ನ ನರಬಲಿಗಳ ಉದ್ಘಾಟನೆ ಮಾಡಿದ್ದು ೧೯೧೮ರಲ್ಲಿ 'ಬಯಿನ್ಜಿ' ಎಂಬ ಹಳ್ಳಿಯಲ್ಲಿ. ಅದರkಂನರಬಲಿ ೧೯೨೬ನೇ ಇಸವಿ ಏಪ್ರಿಲ್ ೧೪ ರಂದು 'ಬಯಿನೇಶ್ವರ' ಎಂಬ ಹಳ್ಳಿಯಲ್ಲಿ. ಈ ಎರಡು ಇಸವಿ ಗಳ ನಡುವಿನ ಕಾಲಾವಧಿಯಲ್ಲಿ ಸರ್ಕಾರಿ ದಾಖಲೆಗಳ ಪ್ರಕಾರ ಅದು ಕೊಂದು ತಿಂದಿರುವುದು ೧೨೪ ಮನುಷ್ಯರನ್ನು. ನರಭಕ್ಷಕನಿಂದಾಗಿ ಅಲ್ಲಿನ ಜನರ ಜೀವನ ಎಷ್ಟು ಭಯಗ್ರಸ್ತವಾಗಿತ್ತು ಎಂಬುದನ್ನು ವಿವರಿಸಲಸಾಧ್ಯ! 'ನಾಳೆ ಬೆಳಗಾದರೆ ನಮ್ಮಲ್ಲಿ ಯಾರು ಇರುತ್ತೇವೋ! ಯಾರು ಇರುವುದಿಲ್ಲವೋ!' ಎಂಬಂತಹ ಭಯದಲ್ಲೇ ಅಲ್ಲಿನ ಜನರು ಪ್ರತೀ ದಿನವನ್ನೂ ಕಳೆಯುತ್ತಿದ್ದರು.



ಸಂಜೆಯಾದರೆ ಸಾಕು ಅಲ್ಲಿನ ಜನರು ಗಟ್ಟಿಯಾಗಿ ಉಸಿರಾಡಲು ಸಹ ಹೆದರುವಂತೆ ಮಾಡಿತ್ತು ಆ ನರಭಕ್ಷಕ. ಕತ್ತಲಾದ ತಕ್ಷಣ ಯಾವ ದಿಕ್ಕಿನಿಂದ ಯಾವ ಸಮಯದಲ್ಲಿ ಆ ಚಿರತೆ ಬರುತ್ತಿತ್ತು ಎಂಬ ಸಣ್ಣ ಸುಳಿವು ಕೂಡ ಜನರಿಗೆ ತಿಳಿಯುತ್ತಿರಲಿಲ್ಲ . ಒಂದು ಚೂರೂ ಸದ್ದಾಗದಂತೆ ಬಂದು ಪಕ್ಕದಲ್ಲಿ ಮಲಗಿದ್ದವರಿಗೂ ತಿಳಿಯದಂತೆ ಮನುಷ್ಯರ ಕುತ್ತಿಗೆಗೆ ಬಾಯಿ ಹಾಕಿ ಕೊಂದು ಎಷ್ಟೋ ಮೈಲುಗಳವರೆಗೆ ಕೊಂಡೊಯ್ಯುತ್ತಿತ್ತು. ಯಾವ ಮನುಷ್ಯರೂ ಕಣ್ಣಿಗೆ ಬೀಳದಿದ್ದರೆ, ತಾನೇ ಮನೆ ಬಾಗಿಲು ಮುರಿದು ನರಬಲಿಯನ್ನು ಪಡೆಯುತ್ತಿತ್ತು!. ಅಲ್ಲಿನ ಜನರು ಆ ನರಭಕ್ಷಕ ಚಿರತೆ ಮೃಗವಲ್ಲ, ಅದೊಂದು ಮೃಗ ರೂಪದ ಪಿಶಾಚಿ ಎಂದೇ ನಂಬಿದ್ದರು. ನರಭಕ್ಷಕನ ನರಬಲಿಗಳು ಹೆಚ್ಚಾಗುತ್ತಿದ್ದಂತೆ ಇಬೋಟ್ಸನ್ (ಉತ್ತರ ಪ್ರದೇಶ ಸರ್ಕಾರಕ್ಕೆ ಸಲಹೆಗಾರರಾಗಿದ್ದರು) ನರಭಕ್ಷಕನ ಬೇಟೆಯಾಡಲು ಜಿಮ್ ಕಾರ್ಬೆಟ್ ರನ್ನು ಕರೆಸುತ್ತಾರೆ. ಘರ್ವಾಲಿಗೆ ಹೋದಂತಹ ಜಿಮ್ ಕಾರ್ಬೆಟ್ ರವರು ತಮ್ಮ ಜೀವದ ಹಂಗನ್ನೂ ಸಹ ತೊರೆದು ಅದೆಷ್ಟೋ ರಾತ್ರಿಗಳು ಕತ್ತಲಲ್ಲಿ, ನರಭಕ್ಷಕ ಓಡಾಡುವ ದಾರಿಗಳಲ್ಲಿ , ಸೇತುವೆಗಳ ಮೇಲೆ, ಅದು ಕೊಂದ ಹೆಣಗಳ ಬಳಿ, ಮರಗಳ ಮೇಲೆಲ್ಲಾ ಕುಳಿತು ನಿದ್ದೆಗೆಟ್ಟು ಆ ಕೊಲೆಪಾತಕಿಯನ್ನು ಕೊಲ್ಲಲು ಪ್ರಯತ್ನಿಸುತ್ತಾರೆ. ಆದರೆ ಆ ನರಭಕ್ಷಕನ ಚಾಣಾಕ್ಷತನ ಎಷ್ಟಿತ್ತೆಂದರೆ ಜಿಮ್ ಕಾರ್ಬೆಟ್ ಅವರ ಯಾವ ಯೋಜನೆಗಳಿಗೂ ಬಗ್ಗದೆ, ತಪ್ಪಿಸಿಕೊಂಡು ಜಿಮ್ ಕಾರ್ಬೆಟ್ ಅವರ ರಕ್ತದ ರುಚಿ ನೋಡಲು ಹಾತೊರೆಯುತ್ತಿತ್ತು.

ಎಷ್ಟೋ ಬಾರಿ ಆ ಚಿರತೆ ಜಿಮ್ ಕಾರ್ಬೆಟ್ ರ ಹೆಜ್ಜೆಯನ್ನು ಹಿಂಬಾಲಿಸಿತ್ತು! ಒಂದೆರಡು ಬಾರಿಯಂತೂ ಇವರು ಮಚಾನನ್ನು ಹಾಕಿ ಕುಳಿತ ಹುಲ್ಲುಗೊಣವೆಯ ಕೆಳಗೇ ಬಂದು ನಿಂತು ಹೋಗಿತ್ತು! ಒಂದೆರಡು ಸಲ ಜಿಮ್ ಕಾರ್ಬೆಟ್ ಅವರು ಆ ನರಭಕ್ಷಕನಿಂದ ಸ್ವಲ್ಪದರಲ್ಲಿ ಬಚಾವಾಗಿದ್ದರು. ಕಾರ್ಬೆಟ್ ಅವರು ಚಿರತೆ ಬರುತ್ತದೆ ಎಂದು ಊಹಿಸಿದ ಜಾಗಗಳಿಗೆ ಅದು ಬರದೆ, ಬೇರೆ ಸ್ಥಳಗಳಲ್ಲಿ ನರಬಲಿಯನ್ನು ಪಡೆದು ಕೇಕೆಹಾಕುತ್ತಿತ್ತು. ಹೀಗೆ ಆ ನರಭಕ್ಷಕನ ಕುಯುಕ್ತಿಯನ್ನು ಮತ್ತು ಜಿಮ್ ಕಾರ್ಬೆಟ್ರ ಸಾಹಸವನ್ನು ಓದುತ್ತಾ ಹೋದರೆ ಮೈ ಜುಮ್ ಎನಿಸುತ್ತದೆ. ಜಿಮ್ ಕಾರ್ಬೆಟ್ ಅವರು ಹಲವು ಬಾರಿ ವಿಫಲವಾದರೂ ಸಹ ತಮ್ಮ ಛಲವನ್ನು ಬಿಡದೆ ಪ್ರಾಣದ ಹಂಗನ್ನು ತೊರೆದು ಕೊನೆಗೂ ಆ ನರಭಕ್ಷಕನನ್ನು ಬೇಟೆಯಾಡಿ ಆ ಕೊಲೆಪಾತಕಿಯನ್ನು ಕೊನೆಗಾಣಿಸುತ್ತಾರೆ. ಅಂದು ಘರ್ವಾಲಿನ ಜನರ ಖುಷಿಗೆ ಪಾರವೇ ಇರಲಿಲ್ಲ ಎಂಟು ವರ್ಷಗಳ ಭಯಾನಕ ದು:ಸ್ವಪ್ನದಿಂದ ಪಾರು ಮಾಡಿದ್ದಕ್ಕೆ ಅಲ್ಲಿನ ಜನರು ಕಾರ್ಬೆಟ್ ರ ಮೇಲೆ ಹೂವಿನ ಮಳೆಯನ್ನೇ ಸುರಿಸಿದ್ದರು, ಏನು ಬೇಕಾದರೂ ಕೊಡಲು ತಯಾರಿದ್ದರು. ಅಷ್ಟೊಂದು ಕೃತಜ್ಞರಾಗಿದ್ದರು ಕಾರ್ಬೆಟ್ ಅವರಿಗೆ.

ಚಿರತೆಗಳು ನರಭಕ್ಷಕಗಳಾಗುವುದು ಬಹು ಅಪರೂಪ, ಆದರೆ ಆಶ್ಚರ್ಯದ ಸಂಗತಿ ಎಂದರೆ ಆ ಚಿರತೆಯು ನರಭಕ್ಷಕನಾಗಿ ರೂಪುಗೊಳ್ಳಲು ಕಾರಣ ಅಲ್ಲಿನ ಜನರೇ!. ಘರ್ವಾಲಿನ ಹಳ್ಳಿಗಳೆಲ್ಲ ಬೆಟ್ಟದ ಮೇಲಿವೆ. ಅಲ್ಲಿನ ಜನರೆಲ್ಲರೂ ಹಿಂದುಗಳಾದ್ದರಿಂದ ಅವರು ಸತ್ತವರನ್ನು ಪರ್ವತದ ತಳದಲ್ಲಿ ಎಲ್ಲೋ ಹರಿಯುವ ನದಿಯ ಬಳಿಗೆ ಹೊತ್ತೊಯ್ದು ದಹನಕ್ರಿಯೆಗಳನ್ನು ಮಾಡಿ ನಂತರ ಚಿತಾಭಸ್ಮವನ್ನು ಸಮೀಪದ ಹರಿಯುವ ನೀರಿನಲ್ಲಿ ವಿಸರ್ಜಿಸಿದರೆ ಅದು ಕೊನೆಗೆ ಗಂಗಾಮಾತೆಯನ್ನು ಸೇರಿ ಮೃತನಿಗೆ ಸದ್ಗತಿ ಪ್ರಾಪ್ತಿಯಾಗುತ್ತದೆಂಬ ನಂಬಿಕೆ ಇತ್ತು. ೧೯೧೮ರಲ್ಲಿ ಇಡೀ ಭಾರತವನ್ನೇ ತತ್ತರಿಸುವಂತೆ ಇನ್ ಫ್ಲುಯೆನ್ಸಾ ಎಂಬ ಸಾಂಕ್ರಾಮಿಕ ರೋಗ ಬಂದಿತು. ಬಹುಪಾಲು ಜನರು ಈ ರೋಗಕ್ಕೆ ತುತ್ತಾಗಿ ಸಾಯಲು ಶುರುವಾದರು, ಜನರ ಶವಗಳನ್ನು ನದಿಯ ಬಳಿಗೆ ಹೊತ್ತೊಯ್ದು ದಹನ ಕಾರ್ಯಗಳನ್ನು ಮಾಡಲು ಕಷ್ಟವಾಗುತ್ತಿತ್ತು. ಆಗ ಅವರು ಒಂದು ಸರಳ ವಿಧಾನವನ್ನು ಅನುಸರಿಸುತ್ತಿದ್ದರು, ಹಳ್ಳಿಗಳ ಬಳಿಯೇ ಅವರು ಮಾಡಬೇಕಾದ ಕ್ರಿಯೆಗಳನ್ನೆಲ್ಲ ಮಾಡಿ ಹೆಣವನ್ನು ಹೊತ್ತುಕೊಂಡು ಹೋಗಿ ಕಿಬ್ಬಿಯಿಂದ ಕಣಿವೆಯ ಪಾತಾಳಕ್ಕೆ ಎಸೆದು ನಮೋ ನಮಃ ಎಂದುಬಿಡುತ್ತಿದ್ದರು. ಒಂದು ಚಿರತೆ ಹಿಮಾಲಯದ ಈ ಕಣಿವೆಯ ಕಾಡೊಳಗಿದ್ದಿದ್ದು, ಅದರ ಸ್ವಾಭಾವಿಕ ಆಹಾರದ ಕೊರತೆ ಇದ್ದಾಗ ಅನಾಯಾಸವಾಗಿ ಬಂದು ಬೀಳುತ್ತಿದ್ದ ಈ ಹೆಣಗಳನ್ನು ತಿಂದು ತಿಂದು ಬದುಕಲಾರಂಭಿಸಿತು. ಆದರೆ ಆ ಹಳ್ಳಿಗಳಲ್ಲಿ ಸಾಂಕ್ರಾಮಿಕ ರೋಗ ನಿರ್ಗಮಿಸಿದ ನಂತರ ಈ ವೇಳೆಗಾಗಲೇ ಸತ್ತ ಮನುಷ್ಯರ ಮಾಂಸ ತಿಂದು ನರಮಾಂಸದ ರುಚಿ ಹಿಡಿದಿದ್ದ ಚಿರತೆಗೆ ಹೊಟ್ಟೆಪಾಡಿನ ಚಿಂತೆ ಶುರುವಾಯಿತು. ಯಾವಾಗ ಅದಕ್ಕೆ ಸರಬರಾಜಾಗುತ್ತಿದ್ದ ಆಹಾರ ನಿಂತಿತೋ ಆಗ ಅದಕ್ಕೆ ನರಹತ್ಯೆ ಅನಿವಾರ್ಯವಾಯಿತು. ಅಷ್ಟೆಲ್ಲಾ ಸಾಹಸ ಪಟ್ಟು ಚಿರತೆಯನ್ನು ಕೊಂದ ನಂತರ ಜಿಮ್ ಕಾರ್ಬೆಟ್ ರಿಗೆ ಅನಿಸಿದ್ದು ಏನೆಂದರೆ ಆ ಭಯಾನಕ ಚಿರತೆ ಮಾಡಿದ ಒಂದೇ ತಪ್ಪೆಂದರೆ ತನ್ನ ಆಹಾರವನ್ನು ಪ್ರಾಣಿಗಳ ಮಾಂಸದಿಂದ ಮನುಷ್ಯದರದಕ್ಕೆ ಬದಲಿಸಿಕೊಂಡಿದ್ದು. ಅದು ಮನುಷ್ಯ ಸಮಾಜಕ್ಕೆ ವಿರುದ್ಧವಾದುದಾದರೂ ಅದೇನೂ ದೈವನಿಯಮಕ್ಕೆ ವಿರುದ್ಧವಾದುದಲ್ಲ! ಒಟ್ಟಿನಲ್ಲಿ ಈ ಕಾದಂಬರಿಯು ಓದುಗರನ್ನು ಬೇರೊಂದು ಲೋಕಕ್ಕೆ ಕರೆದೊಯ್ಯುತ್ತದೆ. ಪೂರ್ಣಚಂದ್ರ ತೇಜಸ್ವಿಯವರ ಅನುವಾದವಂತೂ ಬಹಳ ಅದ್ಭುತವಾಗಿದೆ. ಸ್ವತಃ ತೇಜಸ್ವಿಯವರೇ ನರಭಕ್ಷಕನನ್ನು ಬೇಟೆಯಾಡಿದ್ದಾರೆ ಎಂಬಂತೆ ಅವರು ಜಿಮ್ ಕಾರ್ಬೆಟ್ ರ ಕಥೆಯನ್ನು ಬಹಳ ಜೀವಂತವಾಗಿ ಅನುವಾದಿಸಿದ್ದಾರೆ.

ಅನ್ವಿತ ಡಿ.ಎನ್.
ತೃತೀಯ ವರ್ಷದ ಬಿಎ.

ಕವನ

ಬೆಚ್ಚಗಿನ ಗೂಡಲ್ಲಿ ಸ್ವಚ್ಛಂದದ ನಿದಿರೆಯ ನೀಡುವಳು,
ಈ ದೇಹವೆಂಬ ಕಣ್ಣಿಗೆ ರೆಪ್ಪೆಯೇ ತಾನಾಗಿಹಳು,
ಹೇಳದಿದ್ದರೂ ಕೇಳಿಸಿಕೊಂಡು, ಕೇಳದಿದ್ದರೂ ತಿಳಿದುಕೊಂಡು,
ಎದೆ ಹಾಲ ಕುಡಿಸುವಳು, ಕೈ ತುತ್ತ ಉಣಿಸುವಳು,
ಕೈ ಹಿಡಿದು ಬರೆಸುವಳು, ಕೈ ಹಿಡಿದೇ ನಡೆಸುವಳು,
ಬಿದ್ದರೆ ಮೇಲೆಬ್ಬಿಸುವಳು, ಎದ್ದರೆ ಬೆನ್ತಟ್ಟುವಳು,
ಮಗುವಿನ ನಗುವಲ್ಲೇ ತನ್ನ ನಗುವ ಕಾಣುವ ಈಕೆ,
ತನ್ನೆಲ್ಲಾ ನೋವ ಅಗಿಯುತ್ತಾ, ನುಂಗುತ್ತಾ,
ಈ ಜಗಕ್ಕೇ ತಾಯಾದಳು.....

ಸಹನಾ ತೊಂಡಿಕಟ್ಟಿ, ನಾಲ್ಕನೇ ವರ್ಷದ ಬಿ.ಸಿ.ಎ



ಪ್ರವಾಸಿ ಕಥನ- ಕೊಡಚಾದ್ರಿ

ಅನುಭವ

ಮಲೆನಾಡಿನ ಹಸಿರು ನಾಡಿನಲ್ಲಿ ಅಡಗಿರುವ, ಗಗನಚುಂಬಿ ಹೆಬ್ಬಂಡೆಗಳ ತಾಣವಾದ ಯಾಣ – ಪ್ರಕೃತಿ ಪ್ರಿಯರ ನಿಜವಾದ ಪರಮಪವಿತ್ರ ಗುರಿ. ಯಾಣವು ಉತ್ತರ ಕನ್ನಡದ ಕುಮಟಾ ತಾಲ್ಲೂಕಿಗೆ ಸೇರಿದ್ದು, ಕುಮಟದಿಂದ ಸುಮಾರು 25 ಕಿಲೋಮೀಟರ್ ದೂರದಲ್ಲಿದೆ. ಶಿರಸಿಯಿಂದ ಯಾಣ ಹಳ್ಳಿಗೆ ಬಸ್ ಅಥವಾ ವಾಹನದಲ್ಲಿ ತಲುಪಬಹುದು. ಅಲ್ಲಿಂದ 2 ಕಿ.ಮೀ. ಕಾಲುದಾರಿಯಲ್ಲಿ ನಡೆದು ಹೋಗಬೇಕಾಗುತ್ತದೆ. ಈ ಕಾಲುದಾರಿ ಹಸಿರಿನಿಂದ ಕೂಡಿದ್ದು, ಕಾಡಿನ ಸಿರಿ, ತಂಪಾದ ಗಾಳಿ, ಹಕ್ಕಿಗಳ ಕೂಗು ಮತ್ತು ಹದವಾದ ಹಸಿರು ನೋಟಗಳು ನಡಿಗೆಗೆ ಹೊಸ ಚೈತನ್ಯ ನೀಡುತ್ತವೆ. ಈ ಸುಂದರ ದಾರಿಯಲ್ಲಿ ಸಾಗಿದಂತೆ, ಮೊದಲು ನಮಗೆ ಮೋಹಿನಿ ಶಿಖರ ಕಾಣಿಸುತ್ತದೆ. ಸುಮಾರು 300 ಅಡಿ ಎತ್ತರವಾಗಿರುವ ಈ ಶಿಖರ ನಮ್ಮೆಲ್ಲರ ಕಣ್ಮನ ಸೆಳೆಯುತ್ತದೆ. ಮುಂದೆ ಸಾಗಿದರೆ ಕಾಣಿಸುವ ಭೈರವೇಶ್ವರ ಶಿಖರವು ಸುಮಾರು 390 ಅಡಿ ಎತ್ತರದ್ದಾಗಿದ್ದು, ಉಕ್ಕಿನ ಕೋಟೆಯಂತೆ ಭಾಸವಾಗುತ್ತದೆ. ಕಪ್ಪುಕಲ್ಲಿನ ಈ ಹೆಬ್ಬಂಡೆಗಳ ವೈಶಿಷ್ಟ್ಯತೆ ಮತ್ತು ಶಿಲ್ಪ ಸೌಂದರ್ಯವನ್ನು ನೋಡಿದಾಗ ಪ್ರಕೃತಿ ಮಾತೆಯೇ ಶಿಲ್ಪಿಯಾಗಿ ಈ ಕಲೆಯನ್ನು ರೂಪಿಸಿದಳೋ ! ಎಂಬ ಆಶ್ಚರ್ಯ ಮೂಡುತ್ತದೆ.

ಹಿಂದೂ ಪುರಾಣದ ಪ್ರಕಾರ, ಯಾಣ ಎಂಬ ಪವಿತ್ರ ಸ್ಥಳದಲ್ಲಿ ರಾಕ್ಷಸ ಭಸ್ಮಾಸುರನ ಅಂತ್ಯವಾಗಿದೆಯೆಂದು ಹೇಳಲಾಗುತ್ತದೆ. ಶಿವನಿಂದ "ತಲೆಯ ಮೇಲೆ ಕೈ ಇಟ್ಟವರನ್ನು ಭಸ್ಮ ಮಾಡುವ" ವರ ಪಡೆದ ಭಸ್ಮಾಸುರ, ಅದನ್ನು ಶಿವನ ಮೇಲೆಯೇ ಪ್ರಯೋಗಿಸಲು ಮುಂದಾಗುತ್ತಾನೆ. ಶಿವನು ಆತಂಕಗೊಂಡು ಭಸ್ಮಾಸುರನಿಂದ ಪಾರಾಗಿ ಓಡುತ್ತಾನೆ ಮತ್ತು ವಿಷ್ಣುವಿನ ಸಹಾಯ ಬೇಡುತ್ತಾನೆ. ವಿಷ್ಣು, ಅಪರೂಪದ ಮೋಹಿನಿ ರೂಪವನ್ನು ತಾಳುತ್ತಾನೆ. ಮೋಹಿನಿಯ ಸೌಂದರ್ಯಕ್ಕೆ ಭಸ್ಮಾಸುರನು ಮಂತ್ರಮುಗ್ಧನಾಗಿ ತನ್ನ ತಲೆಯ ಮೇಲೆಯೇ ಕೈ ಇಡುವನು ಕೊನೆಗೂ ಅವನು ಭಸ್ಮವಾಗುತ್ತಾನೆ.

ಈ ಐತಿಹಾಸಿಕ ಪಾಠ ಬೋಧಿಸುವ ನಾಟಕೀಯ ಸ್ಥಳವೇ ಯಾಣ. ಭೂಗರ್ಭ ಶಾಸ್ತ್ರಜ್ಞರ ಪ್ರಕಾರ, ಈ ಪ್ರದೇಶವು ಅತ್ಯಂತ ಪ್ರಾಚೀನ ಕಾಲದಿಂದ ಸುಣ್ಣದ ಕಲ್ಲು ಮತ್ತು ಖನಿಜ ಸಂಪತ್ತಿನಿಂದ ಕೂಡಿದ್ದು. ಇಲ್ಲಿ ಕಾಣುವ ಶಿಲೆಗಳ ರಚನೆ ವೈಜ್ಞಾನಿಕ ದೃಷ್ಟಿಯಿಂದಲೂ ಸಮೃದ್ಧವಾಗಿದೆ. ಇಲ್ಲಿ ಇರುವ ಗುಹೆಗಳೊಳಗೆ ಹೋಗುವುದು ಒಂದು ರೀತಿಯಲ್ಲಿ ಸಾಹಸಮಯ ಅನುಭವ ಸರಿ. ಪ್ರತಿ ವರ್ಷವೂ ಶಿವರಾತ್ರಿಯ ದಿನ, ಇಲ್ಲಿ ಭೈರವೇಶ್ವರ ಸ್ವಾಮಿಯ ಉತ್ಸವ ಆಚರಿಸಲಾಗುತ್ತದೆ. ಸಾವಿರಾರು ಭಕ್ತರು ಮತ್ತು ಪ್ರವಾಸಿಗರು ಈ ಸಂದರ್ಭದಲ್ಲಿ ಯಾಣಕ್ಕೆ ಭೇಟಿ ನೀಡುತ್ತಾರೆ. ಯಾಣ ಮಾತ್ರವಲ್ಲ, ನಮ್ಮ ಕರ್ನಾಟಕದ ಪ್ರತಿ ಹಳ್ಳಿ, ಬೆಟ್ಟ, ಕಾಡು ಒಂದೊಂದು ಕಥೆಗಳನ್ನು ಹೇಳುತ್ತದೆ. ಇಂಥ ಪ್ರಕೃತಿ ಮಡಿಲಿನಲ್ಲಿರುವ, ಇತಿಹಾಸ ಮತ್ತು ಪುರಾಣವನ್ನು ಹತ್ತಿರದಿಂದ ಕಾಣುವ ತಾಣಗಳಿಗೆ ಭೇಟಿ ನೀಡುವುದು ನಮ್ಮೆಲ್ಲರ ಅತ್ಯಂತ ಆಹ್ಲಾದಕರ. ಯಾಣದಂತಹ ತಾಣಗಳು ಪ್ರವಾಸಿಗರಿಗೆ ನಿಸರ್ಗದ ತಾತ್ವಿಕತೆಯ ಜೊತೆಗೆ, ನಮ್ಮ ಸಂಸ್ಕೃತಿಯ ಗಂಭೀರತೆಯನ್ನೂ ಪರಿಚಯಿಸುತ್ತವೆ.



ರಕ್ಷಿತಾ
ದ್ವಿತೀಯ ವರ್ಷದ ಬಿ. ಕಾಮ್

ನನ್ನ ಭವಿಷ್ಯದ ಬಗ್ಗೆ ತಂದೆಯ ಮಾತು

ತಂದೆ ಎಂದರೆ ನಮ್ಮ ಜೀವನದ ಮೊದಲ ಗುರು, ಶ್ರದ್ಧೆಯ ಪ್ರತೀಕ ಹಾಗೂ ನಂಬಿಕೆಯ ಆಧಾರ. ತಾಯಿಯ ಮಮತೆ ಮೃದುವಾದ ಹೂವಿನಂತೆ ಹೃದಯವನ್ನು ತಣಿಸುತ್ತದೆಯಾದರೆ, ತಂದೆಯ ಪ್ರೀತಿ ಕಠಿಣ ಶಿಲೆಯಂತೆ ನಮ್ಮನ್ನು ಬಲಿಷ್ಠರನ್ನಾಗಿ ರೂಪಿಸುತ್ತದೆ. ನನ್ನ ಜೀವನದಲ್ಲಿ ತಂದೆಯೊಂದಿಗೆ ನಡೆದ ಹಲವಾರು ಮಾತುಕತೆಗಳಲ್ಲಿ, ನನ್ನ ಭವಿಷ್ಯದ ಬಗ್ಗೆ ಅವರು ನೀಡಿದ ಸಲಹೆಗಳು ಎಂದಿಗೂ ಮರೆಯಲಾದ ಸಲಹೆಗಳಂತೂ ಅಲ್ಲವೇ ಅಲ್ಲ, ನಾನು ಎಂದಿಗೂ ಮರೆಯಲಾರೆ.

ಒಮ್ಮೆ ರಾತ್ರಿ ಊಟದ ಬಳಿಕ ನಾನು ನನ್ನ ಕನಸುಗಳನ್ನು ಹಂಚಿಕೊಂಡೆ. " ಅಪ್ಪ, ನಾನು ಭವಿಷ್ಯದಲ್ಲಿ ಐ. ಎ.ಎಸ್ ಅಧಿಕಾರಿಯಾಗಿ, ಸಮಾಜಕ್ಕೆ ಉಪಯುಕ್ತ ವ್ಯಕ್ತಿಯಾಗಬೇಕು" ಎಂದು ಹೇಳಿದಾಗ, ತಂದೆ ನೆಮ್ಮದಿಯಾಗಿ ನನ್ನ ಮುಖವನ್ನು ನೋಡಿ ಮುಗುಳ್ನಕ್ಕರು. ನಂತರ ಗಂಭೀರವಾಗಿ ಹೇಳಿದರು: "ಮಗಳೇ, ಕನಸು ಕಾಣುವುದು ಸುಲಭ. ಆದರೆ ಅದನ್ನು ನನಸು ಮಾಡಲು ಧೈರ್ಯ, ಶ್ರಮ ಮತ್ತು ತಾಳ್ಮೆ ಅಗತ್ಯ. ಭವಿಷ್ಯ ಯಾರೂ ಸಿದ್ಧವಾಗಿ ಕೊಡಲಾರದು. ನಿನ್ನ ಪರಿಶ್ರಮವೇ ನಿನ್ನ ಭವಿಷ್ಯವನ್ನು ಕಟ್ಟುತ್ತದೆ. ಅವರ ಮಾತು ನನ್ನ ಹೃದಯದಲ್ಲಿ ಆಳವಾದ ಗುರುತು ಮೂಡಿಸಿತು. ತಂದೆ ಹೇಳಿದರು- " ಯಶಸ್ಸು ಅಂದರೆ ಕೇವಲ ಹಣವಲ್ಲ. ನಿನ್ನ ಜೀವನದ ನಿಜವಾದ ಮೌಲ್ಯ ನಿನ್ನ ನೈತಿಕತೆ, ಮನುಷ್ಯತ್ವ ಮತ್ತು ಇತರರಿಗೆ ನೀಡುವ ಸಹಾಯದಲ್ಲಿದೆ.

ಜನರಿಗೆ ಒಳ್ಳೆಯದನ್ನು ಮಾಡಿದಾಗ ಮಾತ್ರ ನಿನ್ನ ಜೀವನ ಅರ್ಥಪೂರ್ಣವಾಗುತ್ತದೆ." ಈ ಮಾತುಗಳು ನನಗೆ ಜೀವನದ ನಿಜವಾದ ಗುರಿಯನ್ನು ತೋರಿಸಿತು. ತಂದೆ ತಮ್ಮ ಅನುಭವಗಳಿಂದ ಹಂಚಿಕೊಂಡ ಇನ್ನೊಂದು ಮುಖ್ಯ ಪಾಠ ಏನೆಂದರೆ, "ಪರೀಕ್ಷೆಯಲ್ಲಿ ಸಾಧನೆ ಮಾಡುವುದು ಮುಖ್ಯ, ಆದರೆ ಅದಕ್ಕಿಂತ ಮುಖ್ಯವಾದುದ್ದು ಜೀವನದ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು. ಪ್ರಾಮಾಣಿಕತೆ, ಸತ್ಯ, ಶ್ರಮ ಇವುಗಳನ್ನೆಲ್ಲಾ ಕೈಬಿಡಬೇಡ. ಆಗಲೇ ನಿನ್ನ ಭವಿಷ್ಯ ಪ್ರಕಾಶಮಾನವಾಗುತ್ತದೆ. ಆ ಮಾತುಗಳು ನನ್ನ ಮನಸ್ಸಿನಲ್ಲಿ ದೀಪದಂತೆ ಹೊಳೆಯುತ್ತದೆ. ಪ್ರತಿಯೊಂದು ಅಡೆತಡೆ ಎದುರಾದಾಗ ತಂದೆಯ ಆ ಮಾತು ನನಗೆ ಧೈರ್ಯ ತುಂಬುತ್ತದೆ. ಇಂದು ನಾನು ನನ್ನ ಭವಿಷ್ಯದ ದಾರಿ ಕಟ್ಟಿಕೊಳ್ಳತ್ತಿರುವಾಗ, ನನ್ನ ಹೃದಯದಲ್ಲಿ ತಂದೆಯ ಮಾತು ಸದಾ ಕೇಳಿಸುತ್ತಿರುತ್ತದೆ. ನನ್ನ ಬದುಕಿನಲ್ಲಿ ಏನಾದರೂ ಸಾಧನೆ ಮಾಡಿದರೆ, ಅದರ ಬೆನ್ನ ಹಿಂದೆ ಇರುವ ಬಲ ತಂದೆಯ ಮಾತು, ತಂದೆಯ ಪ್ರೋತ್ಸಾಹ ಮತ್ತು ತಂದೆಯ ಮೌನದ ಪ್ರೀತಿಯೇ ಆಗಿರುತ್ತದೆ.



ರಕ್ಷಿತಾ ಯು ಎನ್,
ಪ್ರಥಮ ವರ್ಷ ಬಿ. ಎ.

ದೇಸಿ ಮತ್ತು ಜರ್ಸಿ ಹಸು - ಹಾಲಿನ ಲೋಕದ ಎರಡು ರೂಪಗಳು

ಭಾರತೀಯ ಸಂಸ್ಕೃತಿಯಲ್ಲಿ ಹಸುಗೆ ಸಿಗುವ ಸ್ಥಾನ ಬೇರೆ ಯಾವ ಪ್ರಾಣಿಗೂ ಸಿಕ್ಕಿಲ್ಲ. ಹಸುವನ್ನು "ಗೋಮಾತೆ" ಎಂದು ಕರೆಯುವುದೇ ಅದರ ಮಹತ್ವಕ್ಕೆ ಸಾಕ್ಷಿ. ಅದು ಕೇವಲ ಹಾಲು ಕೊಡುವ ಪ್ರಾಣಿಯಲ್ಲ, ಅಮ್ಮನಂತೆ ಪೋಷಿಸುವ, ಆಶೀರ್ವದಿಸುವ ಸಂಕೇತ. ನಮ್ಮ ಹಳ್ಳಿಗಳಲ್ಲಿ ಪೀಳಿಗೆಯಿಂದ ಪೀಳಿಗೆ ದೇಸಿ ಹಸುಗಳನ್ನು ಸಾಕುತ್ತ ಬಂದಿದ್ದರೂ, ಇಂದಿನ ಕಾಲದಲ್ಲಿ ಜರ್ಸಿ ಹಸುಗಳು ಸಹ ಸಾಮಾನ್ಯ ದೃಶ್ಯವಾಗಿವೆ. ಈ ಎರಡೂ ಹಸುಗಳ ಕಥೆಗಳಲ್ಲಿ ಆರೋಗ್ಯ, ಉತ್ಪಾದನೆ, ವಿಜ್ಞಾನ ಮತ್ತು ಸಂಸ್ಕೃತಿಯ ಆಸಕ್ತಿಕರ ಸಂಗತಿಗಳು ಅಡಗಿವೆ. ಇವುಗಳೆರಡೂ ಮಹತ್ವವುಳ್ಳವು, ಆದರೆ ಗುಣಧರ್ಮದಲ್ಲಿ ಭಿನ್ನವಾಗಿವೆ.

ದೇಸಿ ಹಸು – ಸಂಸ್ಕೃತಿಯ ಅಮೃತಕಲಶ

ದೇಸಿ ಹಸು ಎಂದರೆ ನಾಡಿನ ನೈಸರ್ಗಿಕ ಶಕ್ತಿ. ಅದರ ಹಾಲಿಗೆ ಹಳದಿ ಮಿಶ್ರಿತ ಬಣ್ಣವಿರುತ್ತದೆ. ಇದಕ್ಕೆ ಕಾರಣ "ಬೇಟಾ ಕ್ಯಾರೋಟಿನ್" ಎಂಬ ಪೋಷಕಾಂಶ. ಈ ಹಾಲಿನಲ್ಲಿ ಇರುವ A2 ಪ್ರೋಟೀನ್ ನಮ್ಮ ಹೃದಯ, ಮೆದುಳು, ಎಲುಬುಗಳಿಗೆ ಅತ್ಯುತ್ತಮ. ದೇಸಿ ಹಸುವಿನ ಇನ್ನೊಂದು ವಿಶೇಷತೆ ಅದರ ಬೆನ್ನಿನ ಮೇಲಿರುವ ಕೂಂಪು. ಜನನಂಬಿಕೆಯ ಪ್ರಕಾರ, ಈ ಕೂಂಪಿನಲ್ಲಿ ಸೂರ್ಯಕಿರಣಗಳನ್ನು ಶೋಧಿಸುವ ನಾಡಿಗಳಿವೆ. ಸಂಶೋಧಕರು ಇದರಿಂದ ವಿಟಮಿನ್ ಡಿ ಉತ್ಪಾದನೆಗೆ ನೆರವು ದೊರೆಯುತ್ತದೆ ಎಂದು ಹೇಳುತ್ತಾರೆ. ಹೀಗಾಗಿ, ದೇಸಿ ಹಸು ಕೇವಲ ಪ್ರಾಣಿ ಅಲ್ಲ, ಅದು ನಮ್ಮ ಆರೋಗ್ಯ, ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಯ ಜೀವಂತ ಚಿಹ್ನೆ.

ದೇಹದ ಲಕ್ಷಣಗಳು: ಉದ್ದವಾದ ಕೊಂಬು, ತಲೆ ಮೇಲೆ ಕೂಂಪು, ಉದ್ದ ಬಾಲ – ಶಕ್ತಿಯ ಪ್ರತೀಕ.



ಕುಕುತೂಹಲಕಾರಿ ಸಂಗತಿಗಳು

ಹಸುವಿನ ಗೋಮಯವನ್ನು ಗೋಡೆಯ ಮೇಲೆ ಲೇಪಿಸಿದರೆ ರೇಡಿಯೇಷನ್ ತಡೆಯುತ್ತದೆ ಎಂಬುದನ್ನು ಭಾಭಾ ಅಟಾಮಿಕ್ ರಿಸರ್ಚ್ ಸೆಂಟರ್ ದೃಢಪಡಿಸಿದೆ.

ಕೂಂಪಿನ ರಹಸ್: ಸೂರ್ಯಕಿರಣಗಳನ್ನು ಆಕರ್ಷಿಸುವ ಸಾಮರ್ಥ್ಯ, ವಿಟಮಿನ್ ಡಿ ಉತ್ಪಾದನೆಗೆ ನೆರವು.

ಮಲಮೂತ್ರದ ಮಹಿಮೆ: ಆಯುರ್ವೇದದಲ್ಲಿ ಔಷಧ, ಕೃಷಿಯಲ್ಲಿ ಕೀಟನಾಶಕ, ಮನೆಯ ಲೇಪನದಲ್ಲಿ ಜೈವಿಕ ರಕ್ಷಣಾ ಪದಾರ್ಥ.

ಪೌರಾಣಿಕ ಉಲ್ಲೇಖ: ಋಗ್ವೇದದಲ್ಲೇ "ಗೋಮಯ ವಾಸಃ ಪವಿತ್ರಃ" ಎಂದು ಹೇಳಿರುವುದು ಹಸುಗಳ ಪವಿತ್ರತೆಯ ಸಾಕ್ಷಿ. ಭಾರತದ ಮಣ್ಣಿನ ಗರ್ಭದಿಂದ ಬಂದಿರುವ ದೇಸಿ ಹಸುಗಳು ಕೇವಲ ಹಾಲು ನೀಡುವುದಲ್ಲದೆ, ಆರೋಗ್ಯದ ಶ್ರೇಷ್ಠ ಮೂಲ. ಗಿರ್, ಸಾಹಿವಾಲ್, ಹಳ್ಳಿಕಾರ್, ಅಮೃತಮಹಲ್, ಒಂಗೋಲ್ ಮುಂತಾದ ಜಾತಿಗಳು ವಿಶ್ವಪ್ರಸಿದ್ಧ.

ಜರ್ಸಿ ಹಸು – ಉತ್ಪಾದನೆಯ ರಾಣಿ

ಜರ್ಸಿ ಹಸು ಇಂಗ್ಲೆಂಡ್‌ನ ಜರ್ಸಿ ದ್ವೀಪದಲ್ಲಿ ಹುಟ್ಟಿದ ಈ ಜಾತಿಯನ್ನು 1960ರ ದಶಕದಲ್ಲಿ ಭಾರತಕ್ಕೆ ತರಲಾಯಿತು. ಅದರ ಕಾರಣ ಸರಳ ಹೆಚ್ಚು ಹಾಲು ಬೇಕು. ಜರ್ಸಿ ಹಸು ದಿನಕ್ಕೆ 15–25 ಲೀಟರ್ ಹಾಲು ಕೊಡಬಲ್ಲದು. ದೇಹದಲ್ಲಿ ಬಿಳಿ-ಕಂದು ಬಣ್ಣ, ಚಿಕ್ಕ ಕೊಂಬು, ದಪ್ಪ ದೇಹ ಇರುತ್ತದೆ. ಆದರೆ ಇದರ ಹಾಲಿನಲ್ಲಿ A1 ಪ್ರೋಟೀನ್ ಇರುತ್ತದೆ. ಇದು ದೇಹದಲ್ಲಿ BCM-7 ಎಂಬ ಪೆಪ್ಟೈಡ್ ಉತ್ಪತ್ತಿ ಮಾಡುತ್ತದೆ. ವಿಜ್ಞಾನಿಗಳ ಪ್ರಕಾರ, ಇದು ಕೆಲವರಿಗೆ ಜೀರ್ಣದ ತೊಂದರೆ, ಅಲರ್ಜಿ, ಹೃದಯ ಸಮಸ್ಯೆಗಳನ್ನು ಉಂಟುಮಾಡಬಹುದು. ಜರ್ಸಿ ಹಸು ಹೆಚ್ಚಿನ ಉತ್ಪಾದನೆಗೆ ಸೂಕ್ತವಾದರೂ, ಅದರ ಆಯುಷ್ಯ ದೇಸಿ ಹಸುವಿಗಿಂತ ಕಡಿಮೆ – ಸಾಮಾನ್ಯವಾಗಿ 10–15 ವರ್ಷ ಮಾತ್ರ. ಹೆಚ್ಚು ಆಹಾರ, ಹೆಚ್ಚು ಔಷಧಿ, ಹೆಚ್ಚು ಆರೈಕೆ ಅಗತ್ಯ. ಭಾರತದಲ್ಲಿ ಬಿಸಿಲಿನ ಹವಾಮಾನಕ್ಕೆ ಅದು ಸರಿಯಾಗಿ ಹೊಂದಿಕೊಳ್ಳುವುದಿಲ್ಲ. ಒಮ್ಮೆ ಚಿಂತಿಸಿ ನೋಡಿ ದೇಸಿ ಹಸುವಿನ ಹಾಲು ನಮ್ಮ ಅಜ್ಜಿಯ ಕೈಯಲ್ಲಿ ಮಾಡಿದ ಮನೆಮದ್ದುಗಳಂತಿದೆ.



ಅದು ಕಡಿಮೆ ಸಿಹಿಯಾಗಿದ್ದರೂ ದೀರ್ಘಕಾಲ ಆರೋಗ್ಯ ಕೊಡುತ್ತದೆ. ಜರ್ಸಿ ಹಸುವಿನ ಹಾಲು ಫಾಸ್ಟ್-ಫುಡ್ ಮಾದರಿಯಂತೆ – ತಕ್ಷಣ ತೃಪ್ತಿ ಕೊಡುತ್ತದೆ, ಆದರೆ ದೀರ್ಘಕಾಲದ ಲಾಭ ಕಡಿಮೆ. ಒಂದು ಹಸು ನಮ್ಮನ್ನು ಅಮ್ಮನಂತೆ ಆರೈಕೆ ಮಾಡುತ್ತದೆ; ಇನ್ನೊಂದು ಹಸು ವ್ಯಾಪಾರಿಯಂತೆ ಹೆಚ್ಚು ಉತ್ಪಾದನೆ ಮಾಡುತ್ತದೆ. ಭಾರತೀಯ ಸಮಾಜದಲ್ಲಿ ದೇಸಿ ಹಸು ಕೇವಲ ಪಶುವಲ್ಲ, ಅದು ಪವಿತ್ರತೆ, ಆರೋಗ್ಯ, ಸಂಸ್ಕೃತಿಯ ಪ್ರತೀಕ. ಜರ್ಸಿ ಹಸು ಉತ್ಪಾದನೆಗೆ ಸಹಾಯಕವಾದರೂ, ಗುಣಮಟ್ಟದ ದೃಷ್ಟಿಯಿಂದ ದೇಸಿ ಹಸು ಅಮೂಲ್ಯ. ಹೀಗಾಗಿ, ಹಾಲಿನ ಲೋಕದಲ್ಲಿ ಪ್ರಮಾಣಕ್ಕಿಂತ ಗುಣ ಮುಖ್ಯ. ದೇಸಿ ಹಸುವಿನ ಹಾಲು ಕಡಿಮೆ ಇದ್ದರೂ, ಅದು ನಿಜವಾದ ಅರ್ಥದಲ್ಲಿ ಅಮೃತ.

ಹರ್ಷಿತಾ ಎಮ್,
ದ್ವಿತೀಯ ವರ್ಷದ ಬಿ. ಕಾಮ್

೩. ಮೊದಲುಗಳು..

೧. ಕನ್ನಡದ ಮೊದಲ ವ್ಯಾಕರಣ ಗ್ರಂಥ ಯಾವುದು?

೨. ಮೊದಲ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಎಲ್ಲಿ ನಡೆಯಿತು?

೩. ಕನ್ನಡದ ಮೊದಲ 'ರಾಷ್ಟ್ರಕವಿ' ಬಿರುದು ಪಡೆದವರು ಯಾರು?

೪. ಕರ್ನಾಟಕ ಹೈಕೋರ್ಟಿನ ಪ್ರಥಮ ಮಹಿಳಾ ನ್ಯಾಯಾಧೀಶರು ಯಾರು?

೫. ಭಾರತದ ಪ್ರಥಮ ದಂಡ ನಾಯಕರಾಗಿದ್ದ ಕನ್ನಡಿಗ ಯಾರು?

ಹಿಂದಿನ ಸಂಚಿಕೆಯ ಉತ್ತರಗಳು: - ೦೨

1.ಕವಿರಾಜಮಾರ್ಗ
2.ಮಿತ್ರವಿಂದ ಗೋವಿಂದ
3.ಶಿಶುನಾಳ ಶರೀಫ
4. ಆದಿಪುರಾಣ
5.ರಾಷ್ಟ್ರಕವಿ ಕುವೆಂಪು

ಬಿದಿರು

ಶುನಾಳ ಶರೀಫರ 'ಬಿದಿರು ನಾನ್ಯಾರಿಗಲ್ಲಾದವಳು' ಎಂಬ ತತ್ವಪದವನ್ನು ಕೇಳುತ್ತಿದ್ದರೆ ಬಿದಿರಿನ ಮಹತ್ವ ಎಂಥದ್ದು ಎಂಬುದನ್ನು ತುಂಬಾ ಸರಳವಾಗಿ ಮನಗಾಣಬಹುದು. ಹುಟ್ಟಿನಿಂದ ಸಾವಿನವರೆಗೂ ಒಂದಲ್ಲಾ ಒಂದು ರೀತಿಯಲ್ಲಿ ಉಪಯೋಗವಾಗುವ ಈ ಬಿದಿರು ನಿಜಕ್ಕೂ ನಮ್ಮ ಬಾಳಿಗೊಂದು ಅದ್ಭುತ ಆದರ್ಶವೆಂದರೆ ಅತಿಶಯೋಕ್ತಿ ಆಗಲಾರದು. ಬಿದಿರು ಇದು ಒಂದು ವಿಶೇಷವಾದ ಹುಲ್ಲಿನ ಜಾತಿಯ ಸಸ್ಯ. ಇದು ಮೊಳಕೆಯೊಡೆಯಲು ಹೆಚ್ಚು ಸಮಯವನ್ನು ತೆಗೆದುಕೊಂಡರೂ ಸಹ ಮೊಳಕೆ ಒಡೆದ ನಂತರ ಅತ್ಯಂತ ವೇಗವಾಗಿ ಬೆಳೆಯುತ್ತದೆ. ಈ ಕಾರಣದಿಂದಾಗಿ ಬಿದಿರು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುವ ಸಸ್ಯ ಎಂದು ಹೆಸರುವಾಸಿಯಾಗಿದೆ. ಭೂಮಿಗೆ ಬೀಜವನ್ನು ಬಿತ್ತಿದ ನಂತರ ಮೊಳಕೆ ಒಡೆಯಲು ಸುಮಾರು ೫ ವರ್ಷಗಳನ್ನು ತೆಗೆದುಕೊಳ್ಳುವ ಈ ಬಿದಿರು ಸಸಿಯಾದ ನಂತರ ಕೇವಲ ೬ವಾರಗಳಲ್ಲಿ ೮೦ ಅಡಿಗಳಷ್ಟು ಎತ್ತರವಾಗಿ ಬೆಳೆಯಬಲ್ಲದು.

ಬಿದಿರಿನ ಎತ್ತರ ಅವುಗಳ ಪ್ರಭೇದಗಳ ಮೇಲೆ ಅವಲಂಬಿತವಾಗಿದ್ದು, ಸುಮಾರು ೧೩೦ ರಿಂದ ೧೫೦ ಅಡಿಗಳಷ್ಟು ಎತ್ತರವಾಗಿ ಬೆಳೆಯುವ ಸಾಮರ್ಥ್ಯ ಹೊಂದಿದೆ. ಅವಶ್ಯಕ ಪೋಷಕಾಂಶಗಳು ಸರಿಯಾದ ರೀತಿಯಲ್ಲಿ ದೊರೆತಲ್ಲಿ ಇದು ೨೪ ಗಂಟೆಗಳಲ್ಲಿ ಮೂರು ಅಡಿಗಳವರೆಗೆ ಬೆಳೆಯಬಲ್ಲದು ಎಂಬುದು ನಿಜಕ್ಕೂ ಅಚ್ಚರಿಯ ಸಂಗತಿ. ವಿಶ್ವದಲ್ಲಿ ಸುಮಾರು ೧೩೦೦ ಪ್ರಭೇದದ ಬಿದಿರುಗಳಿದ್ದು, ಭಾರತದಲ್ಲಿ ಸರಿಸುಮಾರು ೧೩೬ ಪ್ರಭೇದಗಳನ್ನು ಕಾಣಬಹುದು. ಡೆಂಡ್ರೋಕ್ಯಾಲಮಸ್ ಜೈಗ್ಯಾಂಟಿಯಸ್ ಎಂಬ ಬಿದಿರು ಅತಿ ಎತ್ತರವಾಗಿ ಮತ್ತು ದೃಢವಾಗಿ ಬೆಳೆಯುವ ಬಿದಿರಾಗಿದೆ. ಕಬ್ಬಿಣದ ಬಿದಿರು ಎಂದು ಕರೆಯಲ್ಪಡುವ ದುಂಡುಬಿದಿರು, ಮನೆ ಕಟ್ಟಲು ಸೇತುವೆಗಳನ್ನು ಕಟ್ಟಲು ಹೆಚ್ಚಾಗಿ ಬಳಕೆಯಾಗುವ ಹೆಬ್ಬಿದಿರು, ದಪ್ಪವಾದ ಮುಳ್ಳುಗಳುಳ್ಳ ಕಿಟ್ಟೆ ಬಿದಿರು, ಮಳೆ ಬೀಳುವ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುವ ಮಳೆಬಿದಿರು, ಸಣ್ಣ ಗಾತ್ರದ ಹಳದಿ ಬಣ್ಣದ ಚಿಕ್ಕಬಿದಿರು, ಕಾಡಿನಲ್ಲಿ ಸಹಜವಾಗಿ ಬೆಳೆಯುವ ಕಾಡುಬಿದಿರು ಹೀಗೆ ಹತ್ತು ಹಲವಾರು ಬಗೆಯ ಬಿದಿರುಗಳನ್ನ ಭಾರತದಲ್ಲಿ ಕಾಣಬಹುದು. ಆಕಾಶದತ್ತ ಮುಖ ಮಾಡಿ ನಿಂತಿರುವ ಈ ಸಸ್ಯ ಹೂ ಬಿಡುವುದು ತುಂಬಾ ವಿರಳ. ಕೆಲವೊಂದು ಪ್ರಭೇದಗಳು ಹೂ ಬಿಡಲು ಬರೋಬ್ಬರಿ ೬೫ ರಿಂದ ೧೨೦ ವರ್ಷಗಳನ್ನು ತೆಗೆದುಕೊಳ್ಳುತ್ತವೆ. ಆದರೆ ಒಂದು ಸಾರಿ ಈ ಸಸ್ಯ ಹೂ ಬಿಟ್ಟರೆ ಅದರ ಆಯುಷ್ಯ ತೀರಿದಂತೆಯೇ ಲೆಕ್ಕ. ಉಕ್ಕಿನಂತಹ ಸಾಮರ್ಥ್ಯ ಹೊಂದಿರುವ ಬಿದಿರು, ಮನೆ ಕಟ್ಟುವ ಮತ್ತು ಸೇತುವೆಗಳನ್ನು ನಿರ್ಮಿಸುವಂತಹ ಕೆಲಸಗಳಲ್ಲಿ ಬಳಕೆಯಾಗುತ್ತಿದ್ದರಿಂದ ಇದನ್ನು 'ಪ್ರಕೃತಿಯಲ್ಲಿರುವ ಹಸಿರು ಉಕ್ಕು ' ಎಂದು ಸಹ ಹೇಳುತ್ತಾರೆ.



ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬಣ್ಣಿಸಿದಂತೆ ಬಿದಿರು ಮಾನವನ ಜೀವನದ ರೂಪಕವೇ ಸರಿ. ಸುಮಾರು ಐದು ವರ್ಷಗಳ ಕಾಲ ಯಾವುದೇ ರೀತಿಯ ಸದ್ದಿಲ್ಲದೆ ತನ್ನ ಅಡಿಪಾಯವನ್ನು ಭದ್ರಗೊಳಿಸಿಕೊಳ್ಳುವ ಈ ಬಿದಿರು ಸಮಯ ಬಂದಾಗ ಸಮರ್ಥವಾಗಿ ಎದ್ದು ನಿಲ್ಲುತ್ತದೆ. ಈ ತತ್ವವನ್ನು ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದೇ ನಿಜವಾದರೆ ಆತನ ಯಶಸ್ಸನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಬಡಗಿ ಕೈಯಲ್ಲಿ ಯಾವುದೇ ಬಿಂಕವಿಲ್ಲದೆ, ಅಹಂ ಅನ್ನು ಬಿಟ್ಟು ಬಾಗಿ, ಆತನ ಕೈಗಳಿಂದ ದೊರೆಯುವ ಪೆಟ್ಟುಗಳನ್ನು ಸಹಿಸಿ, ಸುಂದರವಾದ ರೂಪ ಪಡೆಯುವಂತೆ, ಜೀವನದಲ್ಲಿ ಹಿರಿಯರ ಮುಂದೆ ಬಾಗುತ್ತ ಕಷ್ಟಗಳನೆಲ್ಲಾ ಸಹಿಸಿದರೆ ಸುಖವಾದ ಜೀವನ ಪಡೆಯುತ್ತೇವೆ.

ಉಷಾ ಸಿ ಚಕ್ರಸಾಲಿ
ಪ್ರಥಮ ವರ್ಷ ಬಿ. ಎ.

ಮೆಣಸಿನಹಾಳ ತಿಮ್ಮಣ್ಣಗೌಡ: ಕರ್ನಾಟಕದ ವೀರ, ದೇಶಭಕ್ತರ ಹೃದಯ ಗರ್ಜನೆ

ಎಲೆ ಮರೆಯ ಕಾಯಿ

"ಹುಡುಕಾಡಿ ಬಂದವರನ್ನೋಡಿಸದೆ ಬಿಡದೆ
ಹೊಂಟಾರ...
ಯಾವಾಗಿಂದ್ಲೋ ಅವರ ದರ್ಪ, ಯಾಮಾರಿದ್
ನೋಡ್ರಿ ಅವರ ಕೈಯಾಗ
ನಮ್ಮ ಭಾರತದ ಸಿರಿಯನ್ನು ದಂಡಿಗೆ ಎತ್ತಿ
ಹಾಕ್ಯಾರ,
ಮುಟ್ಟಿ ನೋಡ್ರಿ ಈ ದಂಡಿಗಿ, ನಮ್ಮ ದೇಶದ ಪ್ರತಿ
ಉಸಿರಿನ ಶಕ್ತಿ ಅದ್ಯಾಗೆ ಐತಿ"

- ತಿಮ್ಮಣ್ಣಗೌಡರ ಕ್ರಾಂತಿಗೀತೆಯ ತುಣುಕು

ಇದು ಬರೀ ಪದಗಳಲ್ಲ, ಬ್ರಿಟಿಷರ ನಿದ್ರೆಗೆ ಭಂಗ ತಂದ ನಮ್ಮ ಧೈರ್ಯದ ಗರ್ಜನೆ. ಇತಿಹಾಸದ ಪುಟಗಳಲ್ಲಿ ಅಡಗಿರುವ ಮಹಾನ್ ಕ್ರಾಂತಿಕಾರಿ, ಕರ್ನಾಟಕದ ಧೀಮಂತ ವ್ಯಕ್ತಿತ್ವ

- ಮೆಣಸಿನಹಾಳ ತಿಮ್ಮಣ್ಣಗೌಡ.



ಧಾರವಾಡ ಜಿಲ್ಲೆಯ ಮೆಣಸಿನಹಾಳ ಗ್ರಾಮದ ಶ್ರೀಮಂತ ಗೌಡ ಕುಟುಂಬದಲ್ಲಿ ಜನಿಸಿದ ಇವರು, ಸುಖ ಮತ್ತು ಭೋಗದ ಜೀವನವನ್ನು ಬಿಟ್ಟು, ಸ್ವಾತಂತ್ರ್ಯದ ಬೆಂಕಿಯನ್ನು ತಮ್ಮ ಹೃದಯದಲ್ಲಿ ಅಡಗಿಸಿಕೊಂಡಿದ್ದರು.

ಗೌಡರ ಕ್ರಾಂತಿಕಾರಿ ಪ್ರಜ್ಞೆ

ತಮ್ಮ ಕ್ರಾಂತಿಕಾರಿ ಗುಣಗಳಿಂದಲೇ ಗುರುತಿಸಿಕೊಂಡಿದ್ದ ತಿಮ್ಮಣ್ಣಗೌಡರು, ದೇಶಭಕ್ತಿಯನ್ನು ಕೇವಲ ಭಾಷಣಗಳಿಂದ ವ್ಯಕ್ತಪಡಿಸದೆ, ಅದನ್ನು ನೇರ ಹೋರಾಟಕ್ಕೆ ಇಳಿಸಿದರು. ಜನಸಾಮಾನ್ಯರನ್ನು ಬ್ರಿಟಿಷರ ದಬ್ಬಾಳಿಕೆಯಿಂದ ಬಿಡುಗಡೆಗೊಳಿಸಲು, ಬ್ರಿಟಿಷ್ ಕಚೇರಿಗಳ ಮೇಲೆ ದಾಳಿ ಮಾಡುವುದು ಅಗತ್ಯವೆಂದು ನಂಬಿದ್ದರು. ತಮ್ಮಂತೆಯೇ ಚಿಂತಿಸುವ ಯುವಕರ ತಂಡವನ್ನು ಕಟ್ಟಿಕೊಂಡು, ಅವರು ಬ್ರಿಟಿಷ್ ಸರ್ಕಾರಿ ಕಚೇರಿಗಳನ್ನು ನಾಶ ಮಾಡಿದರು, ಮತ್ತು ಅವರ ಆಸ್ತಿಯನ್ನು ಕಸಿದು ಅದನ್ನು ಬಡ ಜನರಿಗೆ ಹಂಚಿದರು. ಇದು ಅವರ ಹೋರಾಟದ ಮುಖ್ಯ ಗುರಿಯಾಗಿತ್ತು.

ಬ್ರಿಟಿಷರ ಸಿಂಹಸ್ವಪ್ನ

1942ರ 'ಭಾರತ ಬಿಟ್ಟು ತೊಲಗಿ' ಚಳುವಳಿ ಪ್ರಾರಂಭವಾದಾಗ, ಇವರ ಕ್ರಾಂತಿಕಾರಿ ಮನಸ್ಸು ಉಗ್ರರೂಪ ಪಡೆಯಿತು. ಇವರ ನೇತೃತ್ವದಲ್ಲಿ ಯುವಕರ ತಂಡವೊಂದು ಕರ್ನಾಟಕದ ಉತ್ತರ ಭಾಗದಲ್ಲಿ ಬ್ರಿಟಿಷರ ವಿರುದ್ಧ ರಣಕಹಳೆ ಊದಿತು. ತಿಮ್ಮಣ್ಣಗೌಡರ ತಂತ್ರಗಾರಿಕೆಯಿಂದ ಬ್ರಿಟಿಷ್ ಅಧಿಕಾರಿಗಳು ಭಯಗೊಂಡು ದಿಕ್ಕಾಪಾಲಾದರು. ದಾವಣಗೆರೆ ಮತ್ತು ಹೊನ್ನಾಳಿ ಪೋಲೀಸ್ ಠಾಣೆಗಳ ಮೇಲಿನ ದಾಳಿ ಇವರ ಸಾಹಸಕ್ಕೆ ಸಾಕ್ಷಿ. ಪೋಲೀಸರನ್ನು ದಿಗ್ಬಂಧನ ಮಾಡಿ, ಅಲ್ಲಿಯ ಹಣವನ್ನು ಲೂಟಿ ಮಾಡಿ, ಅದನ್ನು ಸಮಾಜದ ಉನ್ನತಿಗೆ ಬಳಸಿದರು. ಇವರ ಕೈಚಳಕ ಎಷ್ಟು ವೇಗವಾಗಿತ್ತೆಂದರೆ, ಬ್ರಿಟಿಷ್ ಸರ್ಕಾರ ಇವರಿಗೆ ಕಂಡಲ್ಲಿ ಗುಂಡು ಹಾರಿಸಲು ಆದೇಶ ನೀಡಿತು. ಇವರ ತಲೆಯ ಮೇಲೆ 2000 ರೂಪಾಯಿ ಬಹುಮಾನ ಘೋಷಿಸಲಾಗಿತ್ತು, ಇದು ಆ ಕಾಲದಲ್ಲಿ ದೊಡ್ಡ ಮೊತ್ತವಾಗಿತ್ತು.

ವೀರ ಮರಣ

ತಿಮ್ಮಣ್ಣಗೌಡರು ಇಡೀ ಬ್ರಿಟಿಷ್ ಸರ್ಕಾರಕ್ಕೆ ಸಿಂಹಸ್ವಪ್ನವಾದರು. ಅವರ ಹೋರಾಟ ಕೇವಲ ಲೂಟಿಗಾಗಿರಲಿಲ್ಲ, ಸ್ವಾತಂತ್ರ್ಯಕ್ಕಾಗಿ ಅವರ ಲೂಟಿಯೂ ಹೋರಾಟದ ಒಂದು ಭಾಗವಾಗಿತ್ತು. ಆದರೆ, ಪಾದರಸದಂತಹ ಅವರ ಆ ಹೋರಾಟದ ಹಾದಿ ಶಾಶ್ವತವಾಗಿರಲಿಲ್ಲ. 1943ರ ಫೆಬ್ರವರಿ 10ರಂದು, ರಾಣೆಬೆನ್ನೂರಿನ ಕಪ್ಪೇಲೂರು ಚಾವಡಿಯಲ್ಲಿ ಹಪ್ತೆ ಹಣ ಲೂಟಿ ಮಾಡುತ್ತಿರುವಾಗ, ದುರಾದೃಷ್ಟವಶಾತ್ ಅವರ ಹ್ಯಾಂಡ್ ಗ್ರನೇಡ್ ಕೈಯಲ್ಲೇ ಸ್ಫೋಟಗೊಂಡಿತು. ತಿಮ್ಮಣ್ಣಗೌಡರು ತೀವ್ರವಾಗಿ ಗಾಯಗೊಂಡರು, ಅವರ ದೇಹದ ಭಾಗಗಳು ಛಿದ್ರಗೊಂಡವು. ರಕ್ತಸಿಕ್ತ ದೇಹದೊಂದಿಗೆ, ಸ್ವಾತಂತ್ರ್ಯದ ಹೋರಟದಲ್ಲಿ ವೀರಮರಣವನ್ನಪ್ಪಿದರು. ಮೆಣಸಿನಹಾಳ ತಿಮ್ಮಣ್ಣಗೌಡರು ಕೇವಲ ಹುತಾತ್ಮರಾಗಿರಲಿಲ್ಲ, ಅವರು ಯುವಕರ ಹೃದಯದಲ್ಲಿ ಸ್ವಾತಂತ್ರ್ಯದ ಜ್ವಾಲೆಯನ್ನು ಸದಾ ಉರಿಯುವಂತೆ ಮಾಡಿದ ಕೆಚ್ಚೆದೆಯ ನಾಯಕ. ಇವರ ಕಥೆ, ಕರ್ನಾಟಕದ ಪ್ರತಿಯೊಬ್ಬರಿಗೂ ಸ್ಫೂರ್ತಿಯಾಗಬೇಕು, ಇದು ಸ್ವಾತಂತ್ರ್ಯದ ಮೌಲ್ಯವನ್ನು ಸಾರುತ್ತದೆ. ಇಂದಿನ ನಮ್ಮ ಈ ಸ್ವಾತಂತ್ರ್ಯಕ್ಕೆ ಅಂದಿನ ತಿಮ್ಮಣ್ಣಗೌಡರಂತಹ ಸಾವಿರಾರು ವೀರರ ತ್ಯಾಗವೇ ಕಾರಣ ಎಂಬುದೇ ಈ ಲೇಖನದ ಸಾರ. ನೆನಪಿಗೆ ತರುತ್ತದೆ. ಅವರ ಈ ವೀರಗಾಥೆ ಸದಾ ನಮ್ಮ ಸ್ಮರಣೆಯಲ್ಲಿರಲಿ.

ಸುಜ್ಞಾನ ಮೂರ್ತಿ ಜಿ ಎಮ್
ನಾಲ್ಕನೇ ವರ್ಷದ ಬಿ.ಸಿ.ಎ

ಸಮಯ: ನಿಮ್ಮ ಅತ್ಯಂತ ಅಮೂಲ್ಯ ಸಂಪತ್ತು

ಕಾಲ/ಸಮಯ.. ನಮಗಾಗಿ ಎಂದೂ ಕಾಯುವುದಿಲ್ಲ.. ಅದರ ಪಾಡಿಗೆ ಅದು ಹೋಗ್ತಾನೆ ಇರುತ್ತೆ.. ಅದಕ್ಕಿರುವ ಶಿಸ್ತು ಖಂಡಿತಾ ಮನುಷ್ಯರಿಗಿಲ್ಲ.. ಯಾವ ಮನುಷ್ಯನಿಗೆ ಸಮಯ ಪ್ರಜ್ಞೆ ಇರುವುದಿಲ್ಲ. ವೊ, ಅವನಲ್ಲಿ ಶಿಸ್ತಿನ ಕೊರತೆ ಇದೆ ಎಂದು ಖಂಡಿತಾವಾಗಿ ಹೇಳ ಬಹುದು. ಇದೆಲ್ಲಾ ಹೇಳಿ ಕೇಳಿ ಬರುವಂತದಲ್ಲ, ಬಲವಂತವಾಗಿಯೂ ಬರುವಂತದಲ್ಲ. ಪ್ರಜ್ಞಾಪೂರ್ವಕವಾಗಿ ನಾವು ಬೆಳೆಸಿ ಕೊಳ್ಳುವಂತದ್ದು..!ಈ ಗುಣಗಳು ಒಬ್ಬ ಮನುಷ್ಯನಿಗೆ ಸಮಾಜದಲ್ಲಿ ಗೌರವ ತಂದು ಕೊಡುತ್ತದೆ.

ಬೇರೊಬ್ಬರ ಸಮಯವನ್ನು ಹಾಳು ಮಾಡುವ ಹಕ್ಕು ನಮಗಿಲ್ಲ ಅನ್ನುವುದನ್ನು ಮೊದಲು ನಾವು ಅರ್ಥ ಮಾಡಿ ಕೊಳ್ಳಬೇಕಿದೆ. ಟೈಮ್ ಎಲ್ಲಿದೆ? ಎಂದು ಹೇಳುವುದು ಒಂದು ಜಾರಿ ಕೊಳ್ಳುವ ತಂತ್ರವಷ್ಟೇ..



ಒಬ್ಬ ಮನುಷ್ಯನಲ್ಲಿ ಶಿಸ್ತು,ಬದ್ಧತೆ, ಬೇರೆಯವರನ್ನು ಗೌರವದಿಂದ ನೋಡುವ ಮನಸ್ಥಿತಿ, ಬದುಕಿನ ಬಗ್ಗೆ ಪ್ರೀತಿ,ಲವಲವಿಕೆ, ಸಂಬಂಧಗಳ ಬಗ್ಗೆ ಗೌರವ, ಇದ್ದರೆ ಅವನು ಎಂದೂ ಟೈಮ್ ಎಲ್ಲಿದೆ ಎಂದು ಕೇಳುವ /ಹೇಳುವ ಪ್ರಮೇಯ ಬರುವುದೇ ಇಲ್ಲ..!

ಇಂದಿನ ಯಾಂತ್ರಿಕ, ವೇಗದ ಬದುಕಿನಲ್ಲಿ ನಾವು ಕೂಡ ಅಷ್ಟೇ ವೇಗವಾಗಿ ಇರಬೇಕಾದದ್ದು ಅತ್ಯಂತ ಅವಶ್ಯಕ...ಸೋಂಬೇರಿಗಳಾಗಿಅಮೂಲ್ಯ ಸಮಯವನ್ನು ಹಾಳು ಮಾಡುವುದರ ಬದಲು ಅದನ್ನು ಸದುಪಯೋಗ ಮಾಡಿಕೊಳ್ಳುವುದು ಇಂದಿನ ಕಾಲದ ಅಗತ್ಯ ಕೂಡ..! ಇಂದು, ಬರೀ ಒಂದು ಕೆಲಸ ಮಾಡಿಕೊಂಡು ಕುಳಿತು ಕೊಳ್ಳುವ ಕಾಲವಲ್ಲ.

ಒಂದು ರೀತಿ multi-tasking ಕಾಲವಿದು. ನಾವೂ ಅದಕ್ಕೆ ತಕ್ಕಂತೆ, ನಮ್ಮನ್ನು ಮಾನಸಿಕವಾಗಿ ಸಿದ್ಧ ಪಡಿಸಿ ಕೊಳ್ಳ ಬೇಕಿದೆ. ಮನುಷ್ಯನಿಂದ ಆಗೋದಿಲ್ಲ ಅನ್ನುವಂತದ್ದು ಯಾವುದೂ ಇಲ್ಲ. ಎಲ್ಲವನ್ನೂ ಆತ ಮಾಡ ಬಲ್ಲ.. ಆದರೆ ಆ ಮನಸ್ಥಿತಿ ಬೆಳೆಸಿ ಕೊಳ್ಳುವಲ್ಲಿ ಆತ ವಿಫಲನಾಗಿರುತ್ತಾನೆ ಅಷ್ಟೇ .! ಇಂದಿನ ಪುಟ್ಟ ಮಕ್ಕಳೆ ಎಲ್ಲವನ್ನೂ ಮಾಡುತ್ತಿರುವಾಗ ದೊಡ್ಡವರಾದ ನಾವು ಯಾಕೆ ಮಾಡೋಕ್ಕಾಗಲ್ಲ.. ಖಂಡಿತಾ ಮಾಡ ಬಹುದು..ಆ ಮನಸ್ಥಿತಿ ಬೆಳಿಸಿ ಕೊಳ್ಳ ಬೇಕಷ್ಟೆ !

ಇಲ್ಲಿ ತಂದೆ ತಾಯಿಗಳ ಪಾತ್ರ ಕೂಡ ಬಹಳ ಮುಖ್ಯ. ಅವರಲ್ಲಿ ಆ ಗುಣ ಇದ್ದರೆ ಅದು ಮಕ್ಕಳಲ್ಲೂ ಖಂಡಿತಾ ಬಂದಿರುತ್ತೆ.ಸಣ್ಣ ಮಕ್ಕಳಿರುವಾಗಲೇ ಮಕ್ಕಳಲ್ಲಿ ಸಮಯ ಪ್ರಜ್ಞೆ, ಅದರ ಮಹತ್ವ, ಕಾಲ ಹರಣ ಮಾಡದಂತೆ ತಮ್ಮನ್ನು ಏನಾದರೊಂದು ಚಟುವಟಿಕೆಯಲ್ಲಿ ತೊಡಗಿಸುವಂತೆ ಅವರಿಗೆ ಮಾರ್ಗ ದರ್ಶನ ನೀಡುವುದು, ಉತ್ತಮ ಸಂಸ್ಕಾರ ನೀಡುವುದು, ಇವೆಲ್ಲವನ್ನು ಮಾಡ ಬೇಕಾಗುತ್ತದೆ. ಆಗ ಮಕ್ಕಳೂ ಅದನ್ನೇ ಪಾಲಿಸುತ್ತಾರೆ. ಪೋಷಕರೇ ಸರಿ ಇಲ್ಲದಿದ್ದರೆ, ಮಕ್ಕಳಿಂದ ಏನನ್ನು ಅಪೇಕ್ಷಿಸಲು ಸಾಧ್ಯ!

ಸಮಯವನ್ನು ಗೌರವಿಸಿ, ಯಶಸ್ಸನ್ನು ಆಕರ್ಷಿಸಿ.
ದಿನಚರಿಯನ್ನು ಯೋಜಿಸಿ, ಗುರಿಗಳನ್ನು ಸಾಧಿಸಿ.
ಪ್ರತಿ ಕ್ಷಣದ ಮೌಲ್ಯವನ್ನು ಅರಿತು, ನಿರ್ದಿಷ್ಟವಾಗಿ ನಡೆಯಿರಿ.
ಸಮಯದ ಶಿಸ್ತಿನಿಂದ, ಜೀವನವನ್ನು ರೂಪಿಸಿರಿ.

ಧನಶ್ರೀ ಗೋರೆ
ಪರೀಕ್ಷಾ ಪರಿಶೀಲನಾ ವಿಭಾಗದ ಸಿಬ್ಬಂದಿ

ಶ್ರೀಮಂತರಾಗಲು ಸುಲಭ ಮಾರ್ಗಗಳು!

ವಾಣಿಜ್ಯಶಾಸ್ತ್ರದಲ್ಲಿ ಉನ್ನತ ಪದವಿ ಪಡೆದು, ಹಣ ಗಳಿಸುವ ಮಾರ್ಗಗಳಲ್ಲಿ ತಕ್ಕಷ್ಟು ಅನುಭವವನ್ನೂ ಪಡೆದಿದ್ದೇನೆ. ಆದರೆ ನನ್ನ ವಿದ್ಯೆ ಮತ್ತು ಅನುಭವದ ಜ್ಞಾನಗಳು ಕೇವಲ ನನ್ನ ಸ್ವಾರ್ಥಕ್ಕೆ ಬಳಕೆಯಾಗುವುದು ನೈತಿಕವಾಗಿ ಸರಿಯಲ್ಲ. ಆದ್ದರಿಂದ ಹತ್ತಾರು ಜನಕ್ಕೆ ಉಪಕಾರ ಮಾಡಬೇಕೆಂಬ ಸಂಕಲ್ಪದಿAದ ನಾನು ಈಗ ನಿಮಗೆ ಶ್ರೀಮಂತರಾಗಲು ಸುಲಭ ಮಾರ್ಗಗಳು ಯಾವುವೆಂದು ತಿಳಿಸುತ್ತೇನೆ. ಇದರಿಂದ ನೀವು ಅತ್ಯಂತ ಕಡಿಮೆ ಶ್ರಮದಲ್ಲಿ ಹೆಚ್ಚು ಹಣವನ್ನು ಸಂಪಾದಿಸಿ, ಶ್ರೀಮಂತರಾಗಬಹುದು. ಈ ಮಾರ್ಗಗಳನ್ನು ಚಾಚೂ ತಪ್ಪದೆ ಪಾಲಿಸಿದ್ದೇ ಆದರೆ ನೀವು ಹಣವಂತರಾಗುವುದು ಖಚಿತ.

*****

ಈ ರೀತಿಯ ಶೀರ್ಷಿಕೆ ಮತ್ತು ಇಂತಹ ಮಾತುಗಳನ್ನು ಕೇಳಿ ಮರುಳಾದವರೆಷ್ಟೋ! ಮನುಷ್ಯನಿಗೆ ತಾನು ಶ್ರೀಮಂತನಾಗಬೇಕು ಎನ್ನುವುದು ಅವನ ಹೆಬ್ಬಯಕೆಗಳಲ್ಲೊಂದು. ಆದರೆ ಆ ಬಯಕೆ ತೀವ್ರವಾದಾಗ ತನ್ನ ಸ್ವಂತ ಬುದ್ಧಿಯನ್ನು ಸುಮ್ಮನಾಗಿಸಿ, ಕೇವಲ ಕಣ್ಣು-ಕಿವಿಗಳನ್ನು ಜಾಗೃತವಾಗಿರಿಸಿ, ಹೀಗೆ ಯಾರನ್ನೋ ಕಂಡು, ಅವರು ಹೇಳುವ ಮಾತುಗಳನ್ನು ಕೇಳಿ, ಅದರಂತೆ ನಡೆದು, ಕೊನೆಗೆ ಇರುವ ಹಣವನ್ನೂ ಕಳೆದುಕೊಂಡು ಮೋಸಹೋಗುವವರೇ ಹೆಚ್ಚು. ಇಂತಹ (ದುರ್)ಘಟನೆಗಳು ಪ್ರತಿದಿನವೂ ನಡೆಯುತ್ತಲೇ ಇವೆ. ಇವನ್ನು ಕಂಡಾಗ ನಾವು ಯೋಚಿಸಬೇಕಾದದ್ದು, ಹಣದ ಸಂಪಾದನೆಗಿAತ ಅದರ ಹಿಂದಿರುವ ನಮ್ಮ ಮನಸ್ಥಿತಿಯ ಬಗ್ಗೆ. ಹಣದ ಬಗ್ಗೆ ನಮಗಿರುವ ಮನಸ್ಥಿತಿಯನ್ನು ಅವಲೋಕಿಸಿಕೊಂಡಾಗ ಮಾತ್ರ ಹಣದ ಸಂಪಾದನೆ ಮತ್ತು ರಕ್ಷಣೆ ಎರಡೂ ಸಾಧ್ಯ. ಹೀಗೆ ಹಣಕಾಸಿನ ನಿರ್ವಹಣೆಯ ಮನಸ್ಥಿತಿ ಮತ್ತು ಅದಕ್ಕೆ ತಕ್ಕಂತೆ ಇರುವ ಸಂಪಾದನೆಯ ಮಾರ್ಗಗಳ ಕುರಿತು ಒಂದು ಸಂಕ್ಷಿಪ್ತವಾದ ವಿಚಾರವೇ ಈ ಲೇಖನ.



ಪಾಶ್ಚಾತ್ಯರ ಅರ್ಥಶಾಸ್ತ್ರದಲ್ಲಿರುವ ಹಲವು ತಾರ್ಕಿಕ ಊಹೆಗಳಲ್ಲಿ (ಅಸಂಪ್ಷನ್) ಒಂದು, "ಮನುಷ್ಯನು ಮೂಲತಃ ತಾರ್ಕಿಕ" (ಹ್ಯುಮನ್ ಬೀಯಿಂಗ್ ಇಸ್ ರಾಷ್ನಲ್) ಎನ್ನುವುದು. ಅಂದರೆ ಮನುಷ್ಯನು ಹಣಕಾಸಿನ ವಿಷಯದಲ್ಲಿ ತಾರ್ಕಿಕವಾಗಿ ಯೋಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುತಾನೆಯೇ ಹೊರತು ಭಾವುಕನಾಗಿ ಅಲ್ಲ ಎನ್ನುವುದು ಇದರ ಸಾರ. ಆದರೆ ಕಾಲಕ್ರಮದಲ್ಲಿ ಈ ಊಹೆಯು ಪ್ರಮಾಣವಾಗಿ ಉಳಿದಿಲ್ಲ. ಮನುಷ್ಯನು ಹಣಕಾಸಿನ ವಿಷಯದಲ್ಲಿ ತರ್ಕದ ಜೊತೆಗೆ ಭಾವುಕನಾಗಿಯೂ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾನೆ ಎಂಬುದು ಸಾಬೀತಾಗಿದೆ. ವಿಶೇಷವಾಗಿ ೧೯೭೯ರಿಂದ ಇದು "ಮನಸ್ಥಿತಿ ಆಧಾರಿತ ಹಣಕಾಸು" (ಬಿಹೇವಿಯೊರಲ್ ಫೈನಾನ್ಸ್) ಎಂದು ಪ್ರತ್ಯೇಕವಾದ ಅಧ್ಯಯನ ಶಾಖೆಯಾಗಿ ಬೆಳೆದಿದೆ. ಇದನ್ನು ನೋಡಿದಾಗ ಹಣಕಾಸಿನ ವಿಷಯದಲ್ಲಿ ಮನುಷ್ಯನ ಭಾವನೆಗಳು ಬಹಳ ಪ್ರಭಾವ ಬೀರುತ್ತವೆ ಎನ್ನುವುದು ಸ್ಪಷ್ಟ. ಮೇಲೆ ಉದಾಹರಿಸಿರುವ ಶ್ರೀಮಂತಿಕೆಯ ಸುಲಭ ಮಾರ್ಗಗಳ ವಿಷಯದಲ್ಲಿಯೂ ಮನುಷ್ಯ ತಾನು ಬೇಗ ದುಡ್ಡು ಮಾಡಬೇಕು ಎನ್ನುವ ಭಾವೋದ್ವೇಗದಿಂದಲೇ ಎಡವುತ್ತಾನೆ ಎನ್ನುವುದು ಸುವೇದ್ಯ.

ಹಾಗದರೆ ಹಣ ಮಾಡಬೇಕು ಎನ್ನುವ ಅಭಿಲಾಷೆಯೇ ತಪ್ಪಾ? ಖಂಡಿತವಾಗಿಯೂ ಅಲ್ಲ. ಮನುಷ್ಯನು ಚೆನ್ನಾಗಿ ಸಂಪಾದಿಸಿ, ಲೌಕಿಕ ಭೋಗಗಳನ್ನು ಅನುಭವಿಸಬೇಕು ಎನ್ನುವುದನ್ನು ನಮ್ಮ ಸನಾತನ ಧರ್ಮವೂ ಹೇಳುತ್ತದೆ.

"ನ್ಯಾಯವಾಗಿ ಸಂಪಾದಿಸು, ದುಡಿದ ಹಣವನ್ನು ಜಾಗ್ರತೆಯಿಂದ ಕಾಪಾಡು, ಆ ಸಂಪತ್ತನು ವೃದ್ಧಿಸು, ಹೆಚ್ಚಿರುವುದನ್ನು ದಾನ ಮಾಡು"; "ಹಣದ ಮಾರ್ಗಗಳು ಮೂರೇ: ದಾನ, ಭೋಗ, ನಾಶ. ಮೊದಲೆರಡು ಆಗದಿದ್ದರೆ ಹಣವು ಕಡೆಯ ಹಾದಿಯನ್ನೇ ಹಿಡಿಯುತ್ತದೆ" ಎಂಬುದೆಲ್ಲ ನಮ್ಮ ಪರಂಪರೆಯಲ್ಲಿ ಕಾಣುವ ಸೂಕ್ತಿಗಳು. ಆದರೆ ಈ ಸಂಪಾದನೆ ಮತ್ತು ಭೋಗಾನುಭವಗಳು ನೈತಿಕವಾಗಿ ಮತ್ತು ತಾರ್ಕಿಕವಾಗಿರಲಿ ಎನ್ನುವುದಷ್ಟೇ ನಿಬಂಧನೆ. ಅಂದರೆ ನಾವು ಹಣವನ್ನು ಗಳಿಸಿ-ಉಳಿಸಿಕೊಳ್ಳುವಾಗ ಪ್ರಜ್ಞಾವಂತರಾಗಿ, ನಮ್ಮ ಸ್ಥಿತಿ-ಅವಶ್ಯಕತೆಗಳನ್ನು ಸಮಾಲೋಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು.

ಈ ವಿಚಾರಲಹರಿಯಲ್ಲಿ ನಾವು ಮೊಟ್ಟಮೊದಲು ಯೋಚಿಸಬೇಕಾದ್ದು ಹಣವನ್ನು ಯಾಕೆ ಸಂಪಾದಿಸಬೇಕು ಎನ್ನುವುದು. ಹಣ ಗಳಿಸುವ ಉದ್ದೇಶ ಸ್ಪಷ್ಟವಾದಲ್ಲಿ ಅದರ ಮಾರ್ಗಗಳೂ ಕೂಡ ಕಾಣುತ್ತವೆ. ಅರ್ಥಶಾಸ್ತ್ರದ ಪ್ರಕಾರ ಹಣವನ್ನು ಮೂರು ಉದ್ದೇಶಗಳಿಗೆ ಬಳಸಬಹುದು: ಜೀವನ ನಿರ್ವಹಣೆ, ಉಳಿಕೆ ಮತ್ತು ಹೂಡಿಕೆ. ಜೀವನ ನಿರ್ವಹಣೆ ಎಂದರೆ ನಮ್ಮ ನಿತ್ಯದ ಬದುಕನ್ನು ಸಾಗಿಸಲು ಮತ್ತು ಚೆನ್ನಾಗಿ ಬದುಕಲು ಬೇಕಾದ ಭೋಗೈಶ್ವರ್ಯಗಳನ್ನು ಹೊಂದಲು ಖರ್ಚು ಮಾಡುವುದು.

ಉಳಿಕೆ ಎಂದರೆ ಹಣವನ್ನು ಖರ್ಚು ಮಾಡದೆ ಭವಿಷ್ಯದ ಅವಶ್ಯಕತೆಗಳಿಗೆಂದು ಮೀಸಲಿಡುವುದು. ಹೂಡಿಕೆ ಎಂದರೆ ಇರುವ ಹಣದಿಂದ, ನಮ್ಮ ಶ್ರಮವಿಲ್ಲದೆ ಹೆಚ್ಚಿನ ಹಣವನ್ನು ಸಂಪಾದಿಸುವುದು. ಅತ್ಯುತ್ತಮ ಹಣಕಾಸಿನ ನಿರ್ವಹಣೆ ಎಂದರೆ ಈ ಮೂರು ಉದ್ದೇಶಗಳ ಸಮತೋಲನ ಸಾಧಿಸುವುದೇ ಆಗಿದೆ. ಇನ್ನು ಎರಡನೆಯದಾಗಿ ಹಣವನ್ನು ಸಂಪಾದಿಸುವ ಮತ್ತು ಖರ್ಚು ಮಾಡುವ ಮಾರ್ಗಗಳ ಬಗ್ಗೆ ನೋಡೋಣ.

ಮೊದಲೇ ತಿಳಿಸಿದಂತೆ ನಮ್ಮ ಉದ್ದೇಶ ಮತ್ತು ಅದರ ಪ್ರಮಾಣ ಸ್ಪಷ್ಟವಾದಲ್ಲಿ ಅದರ ಮಾರ್ಗಗಳು ಸುಲಭವಾಗಿ ಗೋಚರಿಸುತ್ತವೆ. ನಮ್ಮ ಉದ್ದೇಶವು ಜೀವನ ನಿರ್ವಹಣೆ ಆಗಿದ್ದರೆ, ಅನ್ನ-ಆಹಾರ-ಆಶ್ರಯಗಳಿಗೆ ಕೊರತೆಯಿಲ್ಲದೆ, ಸಮಾಜದಲ್ಲಿ ಬದುಕಲು ಬೇಕಾದಷ್ಟು ಭೋಗವನ್ನು ಸಂಪಾದಿಸಿಕೊಡಬಲ್ಲAತಹ ಯಾವ ಉದ್ಯೋಗವೂ ಆಗುತ್ತದೆ. ಸಂಪಾದನೆಯ ಮಿತಿಯಲ್ಲಿ ಖರ್ಚು ಅಥವಾ ಖರ್ಚಿಗೆ ಬೇಕಾದಷ್ಟು ಸಂಪಾದನೆ – ಇದನ್ನು ಸರಿದೂಗಿಸುವಂತೆ ಮುಂಚಿತವಾಗಿ ಯೋಜನೆ ಹಾಕಿಕೊಂಡು ಅದರಂತೆ ನಡೆಯಬೇಕು. ಮತ್ತೊಂದು ಅಂಶ; ದುಂದುವೆಚ್ಚಗಳು ಇದರ ವ್ಯಾಪ್ತಿಗೆ ಬರುವುದಿಲ್ಲ. ದುಂದುವೆಚ್ಚ ದಡ್ಡರಿಗೆ ಮಾತ್ರ! ನಮ್ಮ ಉದ್ದೇಶ ಕೇವಲ ಜೀವನ ನಿರ್ವಹಣೆಯಾದರೆ ಸಾಲದು, ಭವಿಷ್ಯದ ಅನಿಶ್ಚಿತತೆಗಳಿಗೆ ಈಗಿಂದಲೇ ಹಣವನ್ನು ಕೂಡಿಡಬೇಕು. ಹೀಗೆ ಹಣವನ್ನು ಉಳಿಸುವುದು ಹಣಕಾಸು ನಿರ್ವಹಣೆಯಲ್ಲಿ ಬಹಳ ಮುಖ್ಯವಾದ ಅಂಶ.

ಸಾಮಾನ್ಯವಾಗಿ ನಾವು ಗಣಿತ ಸೂತ್ರದಂತೆ ಉಳಿಕೆ=ಸಂಪಾದನೆ-ಖರ್ಚು ಎಂದುಕೊಳ್ಳುತ್ತೇವೆ, ಆದರೆ ಜಾಣರಾದವರು ಈ ಸೂತ್ರವನ್ನು ಸ್ವಲ್ಪ ಬದಲಿಸಿ ಖರ್ಚು=ಸಂಪಾದನೆ-ಉಳಿತಾಯ ಎಂದು ಯೋಚಿಸುತ್ತಾರೆ. ಅಂದರೆ ಸಂಪಾದನೆಯಲ್ಲಿ ಒಂದು ಭಾಗವನ್ನು ಮೊದಲೇ ಉಳಿತಾಯಕ್ಕೆಂದು ತೆಗೆದಿಟ್ಟು, ಮಿಕ್ಕ ಹಣದಲ್ಲಿ ಖರ್ಚನ್ನು ನಿಭಾಯಿಸುತ್ತಾರೆ. ಹೀಗೆ ಉಳಿಸುವ ಹಣವು “ದ್ರವ್ಯ” (ಲಿಕ್ವಿಡ್) ಆಗಿರಬೇಕು, ಎಂದರೆ ಬೇಕಾದ ಸಮಯದಲ್ಲಿ ಕಾಲವಿಳಂಬವಿಲ್ಲದೆ ಸಿಗುವಂತಿರಬೇಕು ಎನ್ನುವುದು ಉಳಿತಾಯದ ಉದ್ದೇಶ. ಇದಕ್ಕಿರುವ ಅತ್ಯುತ್ತಮ ಮಾರ್ಗ ವಿತ್ತಕೋಶಗಳು (ಬ್ಯಾಂಕ್). ಇವು ನಮಗೆ ಉಳಿತಾಯಕ್ಕೆ ಉತ್ತಮ ಅವಕಾಶಗಳನ್ನು ಕಲ್ಪಿಸಿಕೊಟ್ಟಿವೆ. ಇಲ್ಲಿ ಮುಖ್ಯವಾದ ಅಂಶವೆಂದರೆ ಉಳಿತಾಯದ ಹಣವನ್ನು ಭೋಗಕ್ಕೆ ಬಳಸಕೂಡದು.

ಉಳಿತಾಯವು ಮೀಸಲು ನಿಧಿಯಾಗಿ ಆಯಾ ಉದ್ದೇಶಗಳಿಗೇ ಬಳಸಲ್ಪಡಬೇಕು. ಕಡೆಯದಾಗಿ ನಮ್ಮ ಉದ್ದೇಶ ಹೂಡಿಕೆ ಆದರೆ ಅದು ಬಹಳಷ್ಟು ಎಚ್ಚರ ಮತ್ತು ಸಮಯವನ್ನು ಅಪೇಕ್ಷಿಸುತ್ತದೆ. ಹೂಡಿಕೆಯ ಮುಖ್ಯ ಉದ್ದೇಶ ಸಂಪತ್ತಿನ ವೃದ್ಧಿ. ಅದು ಹೆತ್ತ ಮಕ್ಕಳನ್ನು ಬೆಳೆಸಿದಂತೆ.

ಎಚ್ಚರಿಕೆ, ತಾಳ್ಮೆ, ಕಾಲಕಾಲಕ್ಕೆ ಅವಲೋಕನ ಮತ್ತು ದೀರ್ಘಾವಧಿ – ಇವೆಲ್ಲವೂ ಕಡ್ಡಾಯವಾಗಿ ಇರಲೇಬೇಕು. ಇವೆಲ್ಲ ಇದ್ದರೆ ಮಾತ್ರ ಹೂಡಿಕೆಯು ನಾವು ಬಯಸಿದಂತೆ ಹೆಚ್ಚಿನ ಸಂಪತ್ತನ್ನು ನೀಡುತ್ತದೆ. ಹೂಡಿಕೆಗೆ ನಮಗೆ ತಿಳಿದಿರುವ ಪ್ರಸಿದ್ಧ ಮಾರ್ಗ ಷೇರು ಮಾರುಕಟ್ಟೆ. ಆದರೆ ಮೇಲೆ ಹೇಳಿರುವ ನಾಲ್ಕೂ ಅಂಶಗಳು ಇದ್ದರೆ ಮಾತ್ರ ಇದಕ್ಕೆ ಪ್ರವೇಶಿಸಬೇಕು. ಅಪಾಯವನ್ನು ತಾಳಿಕೊಳ್ಳುವ ಆರ್ಥಿಕ ಸದೃಢತೆ ಇದ್ದರೆ ಮಾತ್ರ ಷೇರು ಮಾರುಕಟ್ಟೆಯಲ್ಲಿ ಪೂರ್ಣಾಕಾಲಿಕವಾಗಿ ತೊಡಗಿಸಿಕೊಳ್ಳಬಹುದು. ಆದರೆ ಸಾಮಾನ್ಯ ಜನರಿಗೆ ಇದು ದುಸ್ಸಾಧ್ಯವಾದ್ದರಿಂದ ದೀರ್ಘಾವಧಿಯ ಹೂಡಿಕೆಯೇ ಉತ್ತಮ. ಷೇರು ಮಾರುಕಟ್ಟೆ ಅಲ್ಲದೇ ಚಿನ್ನ-ಬೆಳ್ಳಿ, ಕಾರ್ಪೊರೇಟ್ ಬಾಂಡ್ಸ್, ಮ್ಯೂಚುವಲ್ ಫಂಡ್ಸ್, ನಿವೇಶನ (ರಿಯಲ್ ಎಸ್ಟೇಟ್) ಹೀಗೆ ಹಲವು ಮಾರ್ಗಗಳಿವೆ.

ಸಂಪೂರ್ಣ ಹಣವನ್ನು ಎಂದಿಗೂ ಒಂದೇ ಆಸ್ತಿಯ ಮೇಲೆ ಹೂಡಿಕೆ ಮಾಡಬಾರದು. ಇದರಿಂದ ನಷ್ಟದ ಸಾಧ್ಯತೆ ಹೆಚ್ಚು. ಬದಲಾಗಿ ಹೂಡಿಕೆಯನ್ನು ವಿವಿಧ ಆಯ್ಕೆಗಳಲ್ಲಿ ವಿಭಜಿಸಬೇಕು. ಉದಾಹರಣೆಗೆ, ನಿಮ್ಮಲ್ಲಿ ಹತ್ತು ಲಕ್ಷವಿದ್ದರೆ ಅಷ್ಟನ್ನೂ ಒಂದೇ ಆಸ್ತಿಯಲ್ಲಿ ಹೂಡಬಾರದು. ಒಂದುವೇಳೆ ನಷ್ಟವಾದರೆ ಆಗ ನಿಮ್ಮ ನಷ್ಟದ ಪ್ರಮಾಣ ಶೇ. ೧೦೦ರಷ್ಟಾಗಿರುತ್ತದೆ. ಅದರ ಬದಲು ನೀವು ೪ ವಿವಿಧ ಆಯ್ಕೆಗಳಲ್ಲಿ ತಲಾ ಶೇ. ೨೫ ರಂತೆ ಹೂಡಿಕೆ ಮಾಡಿದರೆ ಒಂದು ಆಸ್ತಿಯಿಂದ ಆಗುವ ನಷ್ಟ ಕೇವಲ ೨೫ ಶೇಕಡ ಮಾತ್ರ ಆಗುತ್ತದೆ. ಅಂದರೆ ಮಿಕ್ಕ ಶೇ. ೭೫ರಷ್ಟು ನಿಮಗೆ ಇನ್ನು ಉಳಿದಿರುತ್ತದೆ. ಮತ್ತೊಂದು ಮುಖ್ಯವಾದ ಅಂಶವೆAದರೆ ಹೂಡಿಕೆಗೆ ಭಾವನೆಗಳನ್ನು ಬೆರೆಸಬಾರದು.

ಉದಾಹರಣೆಗೆ ಚಿನ್ನವನ್ನು ಹೂಡಿಕೆಯ ಉದ್ದೇಶದಿಂದ ಖರೀದಿಸಿದರೆ ಅದು ಹೂಡಿಕೆ ಮಾತ್ರವಾಗಿರಬೇಕೇ ವಿನಃ ಭಾವನಾತ್ಮಕವಾಗಿ ನೆನಪುಗಳನ್ನು ಕದಡುವ ಆಭರಣಗಳಾಗಬಾರದು. ಧರಿಸುವ ಉದ್ದೇಶಕ್ಕೆಂದೇ ಪ್ರತ್ಯೇಕವಾದ ಚಿನ್ನವನ್ನು ಖರೀದಿಸಿಕೊಂಡಿರಬೇಕು. ಹೂಡಿಕೆಗೆ ಭಾವನೆಯನ್ನು ಬೆರೆಸಿದಾಗ ಆಗುವ ದೊಡ್ಡ ಅಪಾಯವೆಂದರೆ ಹೂಡಿಕೆಯ ಆಸ್ತಿಯನ್ನು ಮಾರುವ ಅಥವಾ ಅಡಮಾನ ಮಾಡುವ ಸಂದರ್ಭ ಬಂದಲ್ಲಿ ಬುದ್ಧಿ-ಭಾವನೆಗಳ ನಡುವೆ ಸಂಘರ್ಷವುAಟಾಗಬಹುದು.

ನಿರ್ಣಯ ಕಷ್ಟವಾಗಬಹುದು. ಹೀಗೆ ಹೂಡಿಕೆ ಮತ್ತು ಭಾವನೆಗಳನ್ನು ಬೆರೆಸದೆ ಇರುವುದಕ್ಕೆ ಎಚ್ಚರ ಹಾಗೂ ಮನಸ್ಸಿನ ಸ್ಥೆöÊರ್ಯಗಳು ಅತ್ಯವಶ್ಯಕ. ಒಟ್ಟಾರೆಯಾಗಿ ಹೇಳುವುದಾದರೆ ನಾವು ಮೊದಲು ನಮ್ಮ ಬದುಕಲ್ಲಿ ಜೀವನ ನಿರ್ವಹಣೆ, ಉಳಿಕೆ ಮತ್ತು ಹೂಡಿಕೆ ಇವುಗಳ ಸಮತೋಲನ ಎಷ್ಟಿರಬೇಕು ಎನ್ನುವುದನ್ನು ನಿರ್ಧರಿಸಿಕೊಳ್ಳಬೇಕು.

ಈ ಸಮತೋಲನದ ಪ್ರಮಾಣವು ಜೀವನದ ಬೇರೆ ಬೇರೆ ಘಟ್ಟಗಳಲ್ಲಿ ಬದಲಾಗುತ್ತಿರುತ್ತವೆ. ಆದರೆ ಉದ್ದೇಶದ ಸ್ಪಷ್ಟತೆ ಎನ್ನುವುದು ಮಾತ್ರ ಶಾಶ್ವತ. ನಂತರ ನಮ್ಮ ಉದ್ದೇಶಗಳನ್ನು ಸಫಲವಾಗಿಸಿಕೊಳ್ಳಲು ಇರುವ ಮಾರ್ಗಗಳನ್ನು ಅನ್ವೇಷಿಸಿ, ಅವುಗಳ ಗುಣದೋಷಗಳನ್ನು ತಾರ್ಕಿಕವಾಗಿ ವಿಮರ್ಶಿಸಿ ಕೊನೆಯಲ್ಲಿ ಯೋಜನೆ ಹಾಕಿಕೊಂಡು ಹಣಕಾಸಿನ ನಿರ್ವಹಣೆ ಮಾಡಬೇಕು. ಎಲ್ಲ ಯೋಜನೆಗಳಲ್ಲಿಯೂ ಅನಿಶ್ಚಿತತೆಯ ಅಂಶವನ್ನು ಗಮನಿಸಿ ಅದಕ್ಕೆ ಸಿದ್ಧರಾಗಿರುವುದು ಅನಿವಾರ್ಯ. ಈ ಮಾರ್ಗಗಳನ್ನು ಚಾಚೂ ತಪ್ಪದೆ ಪಾಲಿಸಿದ್ದೇ ಆದರೆ ನಾವು ಹಣವಂತರಾಗುವುದು ಖಚಿತ.

ಚೇತನ್ ಎಸ್
ಸಂಶೋಧನಾ ವಿದ್ಯಾರ್ಥಿ
ನಿರ್ವಹಣಾ ನಿಕಾಯ


ಷಟ್ಪದಿ

ಕುಳಿತರೇಕೆನುವ ನಿಂತರಪರಾಧವೆನುವ ಕೆ-
ರಳಲತಿ ಕೋಪವೆನುವ ಮಲಗಿದರಾಡಿಕೊಳು
ವಿಳೆಯೊಳಗೆ ಸಮಬೆಸವರಿಯದೆ ತೊಳಲುತಿರುವವರೀ ಪಾಡಿಗಿಹುದೆ ಕೊನೆಯು?|
ಮೆಳೆಯಲಳುತೆಲ್ಲರನುಮೋದನೆಯ ಪಡೆವಿಚ್ಛೆ
ಬಳಗವೆಲ್ಲವನು ಮೆಚ್ಚಿಸಿಯೆ ತಿರುವ ಕಿಚ್ಚೆ
ಬೆಳೆವ ಗೀಳುಗಳಿಗೀ ಹುಚ್ಚು ತರವಲ್ಲ ನೀ ನೀನಾಗಿರಲದೆ ಲೇಸು ||

ಕೇಶವ ಚಂದ್ರ
ಸಹಾಯಕ ಪ್ರಾಧ್ಯಾಪಕರು



ಅಕ್ಷರ ಲೋಕದ ಮಹಾ ತಪಸ್ವಿ



ಅದೊಂದು ಪುಟ್ಟ ಹಳ್ಳಿ, ಅಲ್ಲೊಂದು ಪುಟ್ಟ ಸಂಸಾರ, "ಮೆತ್ತಗಿದ್ದಲ್ಲಿ ಮತ್ತೊಂದು ಗುದ್ದು" ಎನ್ನುವ ಹಿರಿಕರ ಗಾದೆಯಂತೆ ಮನೆಯ ಹಿರಿಯ ಹೆಂಗಸು ಮತ್ತು ಹಿರಿ ಮಗನ ಅವಿವೇಕ, ನಿಷ್ಕ್ರಿಯತೆಯಿಂದ ಅದಾಗಲೇ ಬಡತನದ ಬಾಣಲೆಗೆ ಬಿದ್ದಿದ್ದ ಕುಟುಂಬವನ್ನು ಪ್ಲೇಗ್ ಮಾರಿ ಬಂದು, ಒಂದೇ ದಿನದಲ್ಲಿ, ಒಂದು ಗಂಟೆಯ ಅಂತರದಲ್ಲಿ, ಇಬ್ಬರು ಮಕ್ಕಳನ್ನು ಬಲಿ ತೆಗೆದುಕೊಂಡು ಅಕ್ಷರಶಃ ಬೆಂಕಿಗೆ ತಳ್ಳಿರುತ್ತದೆ. ಪ್ಲೇಗ್ ತಗುಲಿ ಆಗಲೇ ಸಾವಿನಂಚಿನಲ್ಲಿದ್ದ ಇನ್ನೊಂದು ಮಗುವನ್ನು ತಾಯಿ ಎತ್ತಿಕೊಂಡು ಹಳ್ಳಿಯ ದೇವರ ಗುಡಿಯಲ್ಲಿರುತ್ತಿದ್ದ ಜಂಗಮರೊಬ್ಬರ ಮಡಿಲಿಗೆ ಹಾಕಿ "ಜಂಗಮರೆ! ನನ್ನ ಹಣೆಬರಹ ಸರಿ ಇಲ್ಲ ಎನಿಸುತ್ತದೆ. ಈಗಾಗಲೇ ಎರಡು ಮಕ್ಕಳನ್ನ ಕಳೆದುಕೊಂಡಿದ್ದೇನೆ. ಈಗ ಇವನಿಗೂ ಪ್ಲೇಗ್ ಬಡಿದಿದೆ. ಹಾಗಾಗಿ ಇವನು ನನ್ನ ಬಳಿ ಇರುವುದು ಬೇಡ. ನಿಮಗೆ ಕೊಟ್ಟುಬಿಟ್ಟಿದ್ದೇನೆ. ಉಳಿದರೆ ನಿಮ್ಮ ಪುಣ್ಯದಿಂದ ಎಂದು ತಿಳಿಯುತ್ತೇನೆ" ಎಂದು ಆ ಜಂಗಮರ ಮಡಿಲಿಗೆ ಹಾಕಿಬಿಡುತ್ತಾಳೆ. ದೈವದ ಕೃಪೆಯೋ ಮಾನವನ ಸಹಜತೆಯೋ, ಅದು ಹೇಗೋ ಆ ಹುಡುಗ ಬದುಕುಳಿಯುತ್ತಾನೆ. ನಂತರ ಆ ಹುಡುಗ ತಾಯಿಯ ಬಳಿಗೆ ಹೋದರೂ ಸಹ ಆ ಜಂಗಮರಲ್ಲಿ ಅದೆಂತಹದೋ ಬಾಂಧವ್ಯ, ಆಪ್ತತೆ ಬೆಳೆದಿರುತ್ತದೆ. ಹಾಗಾಗಿ ಅವರು ಒಟ್ಟಿಗೆ ಆಗಾಗ ಸಮಯ ಕಳೆಯುತ್ತಿರುತ್ತಾರೆ. ಹೀಗೆ ದಿನಗಳು ಸಾಗುತ್ತಿರಬೇಕಾದರೆ ಒಮ್ಮೆ ಊರ ಜನ ಜಾತ್ರೆ ಮಾಡಲು ದೇವರ ಉತ್ಸವ ಮೂರ್ತಿಯನ್ನು ಹೊತ್ತು ಹಣ ಮತ್ತು ಧಾನ್ಯಗಳ ಸಂಗ್ರಹಣೆಗೆ ಹೊರಟಿರುತ್ತಾರೆ. ಇದನ್ನು ಕಂಡ ಜಂಗಮರು ಹೇಳುತ್ತಾರೆ "ಉತ್ಸವ ಮೂರ್ತಿಯನ್ನ ಜಾಸ್ತಿ ಮೆರವಣಿಗೆ ಮಾಡಬೇಡಿ. ಉತ್ಸವ ಮೂರ್ತಿಯ ಓಡಾಟ ಹೆಚ್ಚಾದಷ್ಟು ಮೂಲ ವಿಗ್ರಹದ ಶಕ್ತಿ ಕುಂದುತ್ತದೆ" ಎಂದು. ಆ ಹುಡುಗನಿಗೆ ಇದನ್ನ ಕೇಳಿಸಿಕೊಂಡರು ಸಹ ಈ ಮಾತುಗಳ ಹಿಂದಿರುವ ಘನವಾದ ಅರ್ಥ ತಿಳಿರುವುದಿಲ್ಲ. ಈ ಘಟನೆ ನಡೆದು ಎರಡು ದಶಕಗಳೇ ಕಳೆದಿರುತ್ತವೆ. ಆ ಹುಡುಗ ಬೆಳೆದು ಅಧ್ಯಯನ ಮಾಡಿ ಹೊರರಾಜ್ಯದ ವಿಶ್ವವಿದ್ಯಾನಿಲಯ ಒಂದರಲ್ಲಿ ಪ್ರಾಧ್ಯಾಪಕನಾಗಿರುತ್ತಾನೆ, ಜೊತೆಯಲ್ಲಿ ಕಾದಂಬರಿಗಳನ್ನು ರಚಿಸಿ ಮಾತೃ ರಾಜ್ಯದಲ್ಲಿ, ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧಿಯನ್ನು ಪಡೆದಿರುತ್ತಾನೆ. ಒಂದು ಇಡಿಯ ದಶಕ ಮಾತೃಭಾಷೆಯನ್ನು ಕೇಳದೆ ಹೊರ ರಾಜ್ಯದಲ್ಲಿದ್ದು ಆರೆಂಟು ಕಾದಂಬರಿಗಳನ್ನು ರಚಿಸಿದ ಸಾಹಿತಿ ಮುಂದೆ ವರ್ಗವಾಗಿ ತಾಯಿನಾಡಿಗೆ ಮರಳುತ್ತಾನೆ. ಪ್ರಸಿದ್ಧ ಲೇಖಕ ತಾಯ್ನಾಡಿಗೆ ಮರಳಿ ಬಂದಿದ್ದೆ ತಡ ಸಾಹಿತ್ಯ ಅಭಿಮಾನಿ ಸಂಘಗಳು ಸನ್ಮಾನ, ಸಂವಾದ, ಭಾಷಣ ಇತ್ಯಾದಿಗಳಿಗೆ ಅವರನ್ನ ಆಹ್ವಾನಿಸಲು ಆರಂಭಿಸುತ್ತಾರೆ. ಸಾಹಿತಿಯೂ ಸಹ ಅವರ ಸ್ವಾಗತಗಳನ್ನ ಕೇಳಿ, ಸನ್ಮಾನಗಳನ್ನು ಸ್ವೀಕರಿಸಿ ಹಿಗ್ಗಿ ಹೋಗಿರುತ್ತಾರೆ. ಹೀಗೆ ಆರು ತಿಂಗಳು ಕಳೆದಿರುತ್ತದೆ. ಅದೊಂದು ದಿನ ಎಚ್ಚರಿಕೆಯ ಗಂಟೆ ಬಾರಿಸುತ್ತದೆ. ಹೊರರಾಜ್ಯದಲ್ಲಿದ್ದಾಗ ಅಷ್ಟೊಂದು ಕಾದಂಬರಿಗಳನ್ನು ರಚಿಸಿದ್ದ ಲೇಖಕ ತಾಯ್ನಾಡಿಗೆ ಬಂದು ಪ್ರತಿನಿತ್ಯ ಮಾತೃಭಾಷೆಯಲ್ಲಿ ಮಾತನಾಡುವ ಜನರೊಡನೆ ಸಂಭಾಷಿಸುತ್ತಿದ್ದರು ಸಹ ಒಂದು ಕಾದಂಬರಿಯ ಕರಡನ್ನು ಬರೆಯುವುದಿರಲಿ ಪರಿಜನ್ನು ಸಹ ಬರೆದಿರುವುದಿಲ್ಲ. ತಕ್ಷಣವೇ ಆ ಸಾಹಿತಿಗೆ ಜಂಗಮರ ಮಾತು ನೆನಪಾಗಿಬಿಡುತ್ತದೆ. "ಉತ್ಸವ ಮೂರ್ತಿಯ ಓಡಾಟ ಹೆಚ್ಚಾದಷ್ಟು ಮೂಲ ವಿಗ್ರಹದ ಶಕ್ತಿ ಕುಂದುತ್ತದೆ". ಇದರ ತತ್ವ ಅವರಿಗೆ ಈಗ ಅರ್ಥವಾಗುತ್ತದೆ. ಈ ಅರಿವು ಮೂಡಿದ್ದೇ ತಡ ಸಾಹಿತಿ ನಿರ್ಧಾರ ತೆಗೆದುಕೊಂಡಬಿಡುತ್ತಾರೆ, "ನಾನು ಇನ್ನು ಮುಂದೆ ಭಾಷಣಕಾರನಾಗಿ ಉತ್ಸವ ಮೂರ್ತಿಯಂತೆ ಓಡಾಡುವುದನ್ನ ಕಡಿಮೆ ಮಾಡುತ್ತೇನೆ. ಮೂಲ ವಿಗ್ರಹದಂತೆ ಕೂತು ನನ್ನ ಸಾಹಿತ್ಯದ ಕೃಷಿಯನ್ನು ಮಾಡುತ್ತೇನೆ" ಎಂದು. ಮತ್ತು ಹಾಗೆ ಬಾಳುತ್ತಾರೆ ಸಹ. ಹೀಗೆ ತಪಸ್ಸಿನಂತೆ ಕೂತು ಸಾಹಿತ್ಯ ಕ್ಷೇತ್ರದಲ್ಲಿ ದುಡಿದಿದ್ದರಿಂದಲೇ ಮುಂದೆ 'ಸಾರ್ಥ', 'ಮಂದ್ರ' ದಂತಹ ಶತಮಾನದ ಹಾಗೂ 'ಪರ್ವ'ದಂತಹ ಸಹಸ್ರಮಾನದ ಕಾದಂಬರಿಯನ್ನು ಸಾಹಿತಿಗೆ ರಚಿಸಲು ಸಾಧ್ಯವಾಯಿತು.

ಇವರು ಭಾಷೆ ದೇಶ ಗಡಿಗಳನ್ನ ದಾಟಿ ಬೆಳೆದಿರುವ ಭಾರತದ ಹೆಮ್ಮೆ, ಕನ್ನಡಿಗರ ಗೌರವ, ಗರ್ವ, ಪದ್ಮಭೂಷಣ ಡಾಕ್ಟರ್ ಎಸ್ ಎಲ್ ಭೈರಪ್ಪ. ಜನ ಉತ್ಸವ ಮೂರ್ತಿಯನ್ನು ನೋಡಲು ಹೋಗುವುದು ಮೂಲ ವಿಗ್ರಹದ ಪ್ರಭಾವದಿಂದಾಗಿಯೇ ಹೊರತು ಉತ್ಸವಮೂರ್ತಿಯಿಂದ ಮೂಲ ವಿಗ್ರಹದ ಪ್ರಭಾವ ಹೆಚ್ಚಾಗುವುದಿಲ್ಲ. ನಮಗೆ ಸುಖ ಶಾಂತಿ ಸಮೃದ್ಧಿಯನ್ನು ಕೊಡದಿರುವ ಯಾವ ದೇವಸ್ಥಾನಕ್ಕೂ ನಾವು ಹೇಗೆ ಹೋಗುವುದಿಲ್ಲವೋ ಹಾಗೆ ಜ್ಞಾನ ಪ್ರೇರಣೆ ಆನಂದವನ್ನು ನೀಡದಿರುವ ವ್ಯಕ್ತಿಯ ಬಳಿಯಲ್ಲೂ ಜನ ಹೋಗುವುದಿಲ್ಲ.

ನಮ್ಮ ಭಾಷಣ, ಲೇಖನಗಳು ಉತ್ಸವ ಮೂರ್ತಿಯ ಸ್ವರೂಪಗಳಾದರೆ ನಾವು ಆಯ್ಕೆ ಮಾಡಿಕೊಂಡ ಕ್ಷೇತ್ರದಲ್ಲಿನ ನಮ್ಮ ಸಾಧನೆ ಮೂಲ ವಿಗ್ರಹವಿದ್ದಂತೆ. ಈ ಮೂಲ ವಿಗ್ರಹಕ್ಕೆ ಸತ್ಯ, ನಿಷ್ಠೆ, ಪ್ರಾಮಾಣಿಕತೆಯಿಂದ ತಮ್ಮನ್ನು ತಾವು ತೆಯ್ದುಕೊಳ್ಳದ ಯಾವ ವ್ಯಕ್ತಿಯೂ ಸಾಧಕನಾಗಲು ಸಾಧ್ಯವಿಲ್ಲ. ಈಗ ಹೇಳಿ, ನೀವು ಕೇವಲ ಉತ್ಸವ ಮೂರ್ತಿಯಾಗಲು ಬಯಸುತ್ತೀರೋ ಅಥವಾ ಮೂಲ ವಿಗ್ರಹವಾಗಲು ಬಯಸುತ್ತೀರೋ? ನಾನು ಈಗಿಲ್ಲಿ ಹೇಳಿರುವುದು ಉಗುರಿನೊಂದು ಮೊನೆಯಷ್ಟು ಮಾತ್ರ. ಮುಂದಿನ ಸಂಚಿಕೆಯಲ್ಲಿ ಇವರ ಕಾದಂಬರಿಗಳ ವೈವಿಧ್ಯ, ಆಳ, ವಿಸ್ತಾರ, ಕಾಣ್ಕೆಗಳ ಕುರಿತು ತಿಳಿದುಕೊಳ್ಳೋಣ.

ಹೆದ್ದಾರಿ ರವಿಕುಮಾರ್,
ಸಂಸ್ಕೃತ ಉಪನ್ಯಾಸಕರು

ಯಾಣದ ಕಡೆಗೆ ಯಾನ

ಸ್ಥಳ ಪರಿಚಯ

ಮಲೆನಾಡಿನ ಹಸಿರು ನಾಡಿನಲ್ಲಿ ಅಡಗಿರುವ, ಗಗನಚುಂಬಿ ಹೆಬ್ಬಂಡೆಗಳ ತಾಣವಾದ ಯಾಣ ಪ್ರಕೃತಿ ಪ್ರಿಯರ ನಿಜವಾದ ಪರಮಪವಿತ್ರ ಗುರಿ. ಯಾಣವು ಉತ್ತರ ಕನ್ನಡದ ಕುಮಟಾ ತಾಲ್ಲೂಕಿಗೆ ಸೇರಿದ್ದು, ಕುಮಟದಿಂದ ಸುಮಾರು 25 ಕಿಲೋಮೀಟರ್ ದೂರದಲ್ಲಿದೆ. ಶಿರಸಿಯಿಂದ ಯಾಣ ಹಳ್ಳಿಗೆ ಬಸ್ ಅಥವಾ ವಾಹನದಲ್ಲಿ ತಲುಪಬಹುದು. ಅಲ್ಲಿಂದ 2 ಕಿ.ಮೀ. ಕಾಲುದಾರಿಯಲ್ಲಿ ನಡೆದು ಹೋಗಬೇಕಾಗುತ್ತದೆ. ಈ ಕಾಲುದಾರಿ ಹಸಿರಿನಿಂದ ಕೂಡಿದ್ದು, ಕಾಡಿನ ಸಿರಿ, ತಂಪಾದ ಗಾಳಿ, ಹಕ್ಕಿಗಳ ಕೂಗು ಮತ್ತು ಹದವಾದ ಹಸಿರು ನೋಟಗಳು ನಡಿಗೆಗೆ ಹೊಸ ಚೈತನ್ಯನೀಡುತ್ತವೆ. ಈ ಸುಂದರ ದಾರಿಯಲ್ಲಿ ಸಾಗಿದಂತೆ, ಮೊದಲು ನಮಗೆ ಮೋಹಿನಿ ಶಿಖರ ಕಾಣಿಸುತ್ತದೆ ಸುಮಾರು 300 ಅಡಿ ಎತ್ತರವಾಗಿರುವ ಈ ಶಿಖರ ನಮ್ಮೆಲ್ಲರ ಕಣ್ಮನ ಸೆಳೆಯುತ್ತದೆ. ಮುಂದೆ ಸಾಗಿದರೆ ಕಾಣಿಸುವ ಭೈರವೇಶ್ವರ ಶಿಖರವು ಸುಮಾರು 390 ಅಡಿ ಎತ್ತರದ್ದಾಗಿದ್ದು, ಉಕ್ಕಿನ ಕೋಟೆಯಂತೆ ಭಾಸವಾಗುತ್ತದೆ.



ಕಪ್ಪುಕಲ್ಲಿನ ಈ ಹೆಬ್ಬಂಡೆಗಳ ವೈಶಿಷ್ಟ್ಯತೆ ಮತ್ತು ಶಿಲ್ಪ ಸೌಂದರ್ಯವನ್ನು ನೋಡಿದಾಗ ಪ್ರಕೃತಿ ಮಾತೆಯೇ ಶಿಲ್ಪಿಯಾಗಿ ಈ ಕಲೆಯನ್ನು ರೂಪಿಸಿದಳೋ! ಎಂಬ ಆಶ್ಚರ್ಯ ಮೂಡುತ್ತದೆ. ಹಿಂದೂ ಪುರಾಣದ ಪ್ರಕಾರ, ಯಾಣ ಎಂಬ ಪವಿತ್ರ ಸ್ಥಳವು ರಾಕ್ಷಸ ಭಸ್ಮಾಸುರನ ಅಂತ್ಯವಾಗಿದೆಯೆಂದು ಹೇಳಲಾಗುತ್ತದೆ. ಶಿವನಿಂದ "ತಲೆಯ ಮೇಲೆ ಕೈ ಇಟ್ಟವರನ್ನು ಭಸ್ಮ ಮಾಡುವ" ವರ ಪಡೆದ ಭಸ್ಮಾಸುರ, ಅದನ್ನು ತಾನೇ ಶಿವನ ಮೇಲೆಯೇ ಪ್ರಯೋಗಿಸಲು ಮುಂದಾಗುತ್ತಾನೆ. ಶಿವನು ಆತಂಕಗೊಂಡು ಭಸ್ಮಾಸುರನಿಂದ ಪಾರಾಗಿ ಓಡುತ್ತಾನೆ ಮತ್ತು ವಿಷ್ಣುವನ್ನು ಸಹಾಯಕ್ಕೆ ಕೇಳುತ್ತಾನೆ. ವಿಷ್ಣು, ಅಪರೂಪದ ಮೋಹಿನಿ ರೂಪವನ್ನು ತಾಳುತ್ತಾನೆ. ಮೋಹಿನಿಯ ಸೌಂದರ್ಯಕ್ಕೆ ಭಸ್ಮಾಸುರನು ಮಂತ್ರಮುಗ್ಧನಾಗಿ ತನ್ನ ತಲೆಯ ಮೇಲೆಯೇ ಕೈ ಇಡುವನು – ಕೊನೆಗೂ ಅವನು ಭಸ್ಮವಾಗುತ್ತಾನೆ. ಈ ಐತಿಹಾಸಿಕ ಪಾಠ ಬೋಧಿಸುವ ನಾಟಕೀಯ ಸ್ಥಳವೇ ಯಾಣ. ಭೂಗರ್ಭ ಶಾಸ್ತ್ರಜ್ಞರ ಪ್ರಕಾರ, ಈ ಪ್ರದೇಶವು ಅತ್ಯಂತ ಪ್ರಾಚೀನ ಕಾಲದಿಂದ ಸುಣ್ಣದ ಕಲ್ಲು ಮತ್ತು ಖನಿಜ ಸಂಪತ್ತಿನಿಂದ ಕೂಡಿದೆ. ಇಲ್ಲಿ ಕಾಣುವ ಕಲ್ಲುಶಿಲೆಗಳ ರಚನೆ ವೈಜ್ಞಾನಿಕ ದೃಷ್ಟಿಯಿಂದಲೂ ಅಪೂರ್ವ. ಇಲ್ಲಿ ಇರುವ ಗುಹೆಗಳೊಳಗೆ ಹೋಗುವುದು ಒಂದೇ ರೀತಿಯ ಸಾಹಸಮಯ ಅನುಭವೇ ಸರಿ. ಪ್ರತಿ ವರ್ಷವೂ ಶಿವರಾತ್ರಿ ದಿನ, ಇಲ್ಲಿ ಭೈರವೇಶ್ವರ ಸ್ವಾಮಿಯ ಉತ್ಸವ ಆಚರಿಸಲಾಗುತ್ತದೆ. ಸಾವಿರಾರು ಭಕ್ತರು ಮತ್ತು ಪ್ರವಾಸಿಗರು ಈ ಸಂದರ್ಭದಲ್ಲಿ ಯಾಣವನ್ನು ಭೇಟಿ ಮಾಡುತ್ತಾರೆ.

ಯಾಣ ಮಾತ್ರವಲ್ಲ, ನಮ್ಮ ಕರ್ನಾಟಕದ ಪ್ರತಿ ಹಳ್ಳಿ, ಬೆಟ್ಟ, ಕಾಡು ಒಂದೊಂದು ಕಥೆಯನ್ನು ಹೇಳಿಕೊಳ್ಳುತ್ತದೆ. ಇಂಥ ಪ್ರಕೃತಿ ಮಡಿಲಿನಲ್ಲಿರುವ, ಇತಿಹಾಸ ಮತ್ತು ಪೌರಾಣಿಕತೆಯನ್ನು ಹತ್ತಿರದಿಂದ ಕಾಣುವ ತಾಣಗಳಿಗೆ ಭೇಟಿ ನೀಡುವುದು ನಮ್ಮೆಲ್ಲರ ಜವಾಬ್ದಾರಿ. ಯಾಣದಂತಹ ತಾಣಗಳು ಪ್ರವಾಸಿಗರಿಗೆ ನಿಸರ್ಗದ ತಾತ್ವಿಕತೆಯ ಜೊತೆಗೆ, ನಮ್ಮ ಸಂಸ್ಕೃತಿಯ ಗಂಭೀರತೆಯನ್ನೂ ಪರಿಚಯಿಸುತ್ತವೆ.

ರಕ್ಷಿತಾ
ದ್ವಿತೀಯ ವರ್ಷದ ಬಿ. ಕಾಮ್

ಕ್ಷಮಿಸಬೇಕು! ಇದು 'ಕೌನ್ ಬನೇಗಾ ಕರೋಡ್‌ಪತಿ' ಪ್ರಶ್ನೆಗಳಲ್ಲ ಇಲ್ಲಿ 'ಹಾಟ್ ಸೀಟ್' ಇಲ್ಲ, 'ಕಂಪ್ಯೂಟರ್‌ಜೀ ಲಾಕ್ ಕರ್ದಿಜಿಯೇ ಎನ್ನುವ 'ಅಮಿತಾಬಚ್ಚನ್' ರವರೂ ಇಲ್ಲ. ದ್ವಿಗುಣಗೊಳ್ಳುತ್ತಾ ಹೋಗುವ ಬಹುಮಾನಗಳೂ ಇಲ್ಲ. ಇಲ್ಲಿರುವುದು ಎರಡು ಪುಟ್ಟ ಪ್ರಶ್ನೆಪತ್ರಿಕೆಗಳು, ನಮಗಿಷ್ಟವಿದ್ದರೆ, ಉತ್ತರಿಸಿದರೆ ನಾವು ಪಡೆಯುವ ಆನಂದವೇ ಬಹುಮಾನ!

ಮೊದಲನೆಯ ಪ್ರಶ್ನೆ ಪತ್ರಿಕೆ :

೧) ನಮ್ಮ ರಾಜ್ಯದ ಐದು ಜನ ಅತ್ಯಂತ ಶ್ರೀಮಂತರುಗಳು ಯಾರು?

೨) ನಮ್ಮ ರಾಜ್ಯದ ಐದು ಜನ ಅತ್ಯಂತ ಪ್ರಭಾವಿ ವ್ಯಕ್ತಿಗಳು ಯಾರು?

೩) ನಮ್ಮ ರಾಜ್ಯದಿಂದ ಮಿಸ್ ಇಂಡಿಯಾ ಪ್ರಶಸ್ತಿಗೆ ಆಯ್ಕೆಯಾದ ಐದು ಜನ ಸುರಸುಂದರಿಯರು ಯಾರು?

೪) ಕಳೆದ ವರ್ಷ ರಾಜ್ಯೋತ್ಸವ ಪ್ರಶಸ್ತಿ ಗಳಿಸಿದ ಐದು ಜನರ ಹೆಸರನ್ನಾದರೂ ಬರೆಯಿರಿ?

೫) ನಮ್ಮ ರಾಜ್ಯದಿಂದ ಕ್ರಿಕೇಟ್ ಆಟಗಳಲ್ಲಿ ಹೆಸರು ಮಾಡಿದ ಐದು ಕ್ರೀಡಾಪಟು ಯಾರು?

೬) ನಮ್ಮ ಊರಿಗೆ ಇತ್ತೀಚೆಗೆ ಮೇಯರ್ / ನಗರ ಸಭಾಧ್ಯಕ್ಷ/ ಗ್ರಾಮ ಪಂಚಾಯಿ ಅಧ್ಯಕ್ಷರಾಗಿದ್ದ ಐದು ಜನರು ಯಾರು?

ಅಂತರಂಗ ಸಮೀಕ್ಷೆ

ಎರಡನೆಯ ಪ್ರಶ್ನೆ ಪತ್ರಿಕೆ:

೧) ನಿಮ್ಮ ಶಾಲಾದಿನಗಳಲ್ಲಿ ನಿಮಗೆ ಸಹಾಯ ಮಾಡಿದ ಕನಿಷ್ಠ ಐದು ಜನ ಅಧ್ಯಾಪಕ ಅಧ್ಯಾಪಕಿಯರ ಹೆಸರುಗಳನ್ನು ಬರೆಯಿರಿ.

೨) ನಿಮಗೆ ವೈಯುಕ್ತಿಕವಾಗಿ ಏನೋ ಸಮಸ್ಯೆ ಬಂದಾಗ ಸಹಾಯ ಮಾಡಿದ ಐದು ಜನರುಗಳ ಹೆಸರುಗಳನ್ನು ಬರೆ ಯಿರಿ

೩. ನಿಮ್ಮೊಂದಿಗೆ ಆಡಿ ನಕ್ಕು ನಲಿದ ಐದು ಜನ ಗೆಳೆಯ/ ಗೆಳತಿಯರ ಹೆಸರುಗಳನ್ನು ಬರೆಯಿರಿ.

೪) ನಿಮ್ಮ ಹವ್ಯಾಸಗಳ ಮೇಲೆ ಗಾಢಪ್ರಭಾವ ಬೀರಿರುವ ಐದು ಜನರ ಹೆಸರುಗಳನ್ನು ಬರೆಯಿರಿ.

೫) ಅವರೊಂದಿಗೆ ಕಳೆಯುವ ಸಮಯ ಆನಂದಮಯ ಎನಿಸುವ ಐದು ಜನ ಗೆಳೆಯ/ಗೆಳತಿಯರ ಹೆಸರು ಬರೆಯಿರಿ.

೬) ನೀವು ಗೆದ್ದಾಗ ಸಂತೋಷಿಸಿದ, ಬಿದ್ದಾಗ ಕನಿಕರಿಸಿದ ಐವರನ್ನು ಹೆಸರಿಸಿ


ಮೇಲ್ಕಂಡ ಆರೇ ಪ್ರಶ್ನೆಗಳನ್ನು ಉತ್ತರಿಸಲು ಘಂಟೆ ಸಮಯ ಕೊಟ್ಟರೂ ಎಲ್ಲ ಪ್ರಶ್ನೆಗಳು ಸರಿಯಾಗಿ ಉತ್ತರಿಸುವವರ ಸಂಖ್ಯೆ ಕಡಿಮೆ. ಆದರೆ ಅವರ ಸಾಧನೆಗಳನ್ನು ಪತ್ರಿಕೆಗಳಲ್ಲಿ ಓದಿದ್ದೇವೆ, ಟಿ.ವಿ.ಯಲ್ಲಿ ನೋಡಿದ್ದೇವೆ. ವಾರೆವ್ಹಾ, ಎಂದಿದ್ದೇವೆ, ಚಪ್ಪಾಳೆ ತಟ್ಟಿದ್ದೇವೆ, ಹಾರತುರಾಯಿಗಳನ್ನು ಹಾಕಿ ಅವರೊಂದಿಗೆ ಫೋಟೋ ತೆಗೆಸಿಕೊಂಡು ಜನ್ಮ ಸಾರ್ಥಕ ಎಂದುಕೊಂಡಿದೇವೆ. ಆದರೆ ಬಹಳಷ್ಟು ಜನರ ಹೆಸರು ನೆನಪಿಗೆ ಬರುತ್ತಿಲ್ಲ ಇದು ಅಸಹಜವೇನಲ್ಲ, ಚಿಂತಿಸಬೇಕಾಗಿಲ್ಲ.

ಮೇಲ್ಕಂಡ ಪ್ರಶ್ನೆಗಳಿಗೆ ಉತ್ತರಿಸಲು ಕೇವಲ ಹತ್ತು ನಿಮಿಷಗಳ ಸಮಯಾವಕಾಶ ದೊರೆತರೂ ಬಹಳಷ್ಟು ಪ್ರಶ್ನೆಗಳಿಗೆ ನಾವೆಲ್ಲ ಸರಿಯಾಗಿ ಉತ್ತರಿಸಿರುತ್ತೇವೆ. ಎಲ್ಲ ಪ್ರಶ್ನೆಗಳಿಗೂ ಸೇರಿ ಸುಮಾರು ಮೂವತ್ತು ಹೆಸರುಗಳನ್ನು ಬರೆದಿರುತ್ತೇವೆ. ನಾವಿಲ್ಲಿ ಗಮನಿಸಬೇಕಾದ ಒಂದಂಶ ಎಂದರೆ, ಈ ಮೂವತ್ತು ಜನರಲ್ಲಿ ಬಹಳಷ್ಟು ಜನ ಶ್ರೀಮಂತರಲ್ಲ, ತುಂಬ ಸೌಂದರ್ಯವಂತರೂ ಅಲ್ಲ ! ಆಚೆ ಶಕ್ತಿಶಾಲಿಗಳಲ್ಲ, ತುಂಬ ಪ್ರಭಾವಿಗಳೂ ಅಲ್ಲ! ಆದರೂ ಅವರ ಹೆಸರುಗಳು ನಮಗೆ ಚಕ್ಕನೆ ನೆನಪಿಗೆ ಬರಲು ಕಾರಣವೇನೆಂದು ನಮಗೆ ಚೆನ್ನಾಗಿ ಗೊತ್ತು.

ಈಗ ಎರಡೂ ಪ್ರಶ್ನೆ ಪತ್ರಿಕೆಗಳನ್ನು ಬದಿಗಿಡೋಣ.ಬೇರೆ ಯಾರಿಗಾದರೂ ಎರಡನೆಯ ಪಶ್ನೆ ಪತ್ರಿಕೆ ಕೊಟ್ಟರೆ, ಅವರ ಉತ್ತರಗಳಲ್ಲಿ ನಮ್ಮ ಹೆಸರು ಎಲ್ಲಾದರೂ ಬರುವುದಾದರೆ, ನಾವು ಶ್ರೀಮಂತರೂ, ಸೌಂದರ್ಯವಂತರೂ, ಶಕ್ತಿಶಾಲಿಗಳೂ, ಪ್ರಭಾವಿಗಳೂ ಅಲ್ಲದಿದ್ದರೂ, ನಮ್ಮ ಬದುಕು ಸಾರ್ಥಕ! ಅಲ್ಲವೇ...

ಕುಸುಮ ಸಿ ಎಮ್
ತೃತೀಯ ಬಿ.ಎ

ಪದಗಳಂಗಳ-೦೩



ಎಡದಿಂದ ಬಲಕ್ಕೆ:

2. ಕರಾವಳಿ ಪ್ರದೇಶದಲ್ಲಿ ನಾಗಗಳನ್ನು ಪೂಜಿಸುವ ಬಗೆಯಿದು (5)
5. ಉತ್ತರ ಕರ್ನಾಟಕದಲ್ಲಿ ಹಿಂದೂಸ್ಥಾನಿ ಸಂಗೀತದ ಪ್ರಮುಖ ಸ್ಥಾನವಾಗಿದೆ ಇದು (3)
6. ಈ ಚೆಲುವೆ ಮಣಿಯ ಸರ ಧರಿಸಿದ್ದಾಳೆ (3)
7. ಗೆಲುವನ್ನು ಹೀಗೆನ್ನಿ (2)
9. ಮುದ್ದು ಮುದ್ದಾದ ಎಳೆಯ ಆಕಳು (2)
10. ಮಂದಿಯು ಇಲ್ಲಿದ್ದಾರೆ (2)
11. ಕೈ ಎಂದಾದರೂ ಎನ್ನಿ, ಕೈಯಿಂದ ಪಾವತಿಸುವ ಸುಂಕವೆಂದಾದರೂ ಎನ್ನಿರಿ (2)
15. ಭಾದ್ರಪದ ಮಾಸದಂದು ಮನೆಮನೆಗೂ ಈತನ ಆಗಮನ (3)
16. ಸ್ಪಟಿಕವನ್ನು ಅಚ್ಚ ಕನ್ನಡದಲ್ಲಿ ಹೀಗೆನ್ನೋಣ (3)
17. ಕರ್ಪೂರದಾರತಿಯಿದು (5)

ಮೇಲಿಂದ ಕೆಳಕ್ಕೆ :

1. ಕಾದು ಕಾದು ವಿಷಯವನ್ನು ಮುದ್ರಿಸಿದ್ದು ಈ ಹಾಳೆಯ ಮೇಲೆ (3)
2. ಅಹಿಗಳ ದೊರೆಯಿವನು ಶೇಷ (4)
3. ಬಯಸಿದುದು ಈಡೇರಿದ್ದು(4)
4. ಅಲ್ಪ ಹೊತ್ತಿನದು(3)
8. ಸೂರ್ಯನ ಮಗಳು, ಯಮರಾಜನ ಸಹೋದರಿ (3)
9. ಚಿನ್ನವನ್ನು ಹೀಗೆನ್ನಿ(3)
10. ತಲೆತಲೆಮಾರಿನಿಂದ ಮೌಖಿಕವಾಗಿ ಹರಿದು ಬಂದಿರುವ ಜ್ಞಾನ ಮತ್ತು ಸಂಪ್ರದಾಯಗಳು (4)
12. ರಘುವಂಶದ ಅಧಿಪತಿ(4)
13. ನರರು ವಾಸಿಸುವ ಪಟ್ಟಣವಿದು (3)
14. ಆಧಾರ, ಮೂಲ (3)

ಸುಶ್ಮಿತಾ ಬಿ. ಆರ್,
ತೃತೀಯ ಬಿ.ಎ.

ಹಿಂದಿನ ಸಂಚಿಕೆಯ ಉತ್ತರಗಳು: ಪದಗಳಂಗಳ -೦೨

ಎಡದಿಂದ ಬಲಕ್ಕೆ
1.ಬಂದರು 3.ಗರುಡ 5. ಪಡೆ 6. ಬ್ಯಕ 8.ವಾಹಿನಿ 9. ಕಿವಿಮಾತು 11. ಸಿಹಿತಿಂಡಿ 13. ದೇವಾಲಯ 15. ಆಕಸ್ಮಿಕ 17. ಶತಕ 18.ಕಿವಿ 20.ಮಾತೆ 21.ಧಮನಿ 22.ಕಲ್ಯಾಣಿ

ಮೇಲಿಂದ ಕೆಳಕ್ಕೆ-
1. ಬಂಡೆ 2. ರುಜುವಾತು 3.ಗಮನಿಸಿ 4. ಡಬ್ಬಿ 5. ಪಟಾಕಿ 7. ಕರಡಿ 10.ಮಾರ್ಜಾಲ 12. ಹಿರಿಕ 13. ದೇವಕಿ 14.ಯಶಸ್ವಿನಿ 15. ಆಕರ್ಷಕ 16.ಕವಿತೆ 19. ವಿಧ 20. ಮಾಣಿ

ಮಾಯಾಚೌಕ - 02

		7	8		3		6	
8	1			2			7	4
	5		9			3		
		9	1				4	2
1	6		3		2			
	2			6			3	9
		2	6		9		5	1
6					5	7		
		5	7		1			6

ಹಿಂದಿನ ಸಂಚಿಕೆಯ ಉತ್ತರಗಳು: ಮಾಯಾಚೌಕ - 01

8	2	**3**	6	4	**9**	**1**	5	**7**
7	**5**	4	8	**2**	1	3	9	6
1	6	9	3	**7**	5	2	**8**	4
9	**4**	8	1	5	**3**	6	**7**	2
6	**3**	1	7	8	2	**5**	4	**9**
2	7	5	**9**	**6**	**4**	8	3	**1**
3	8	**7**	**2**	9	6	4	1	5
4	**9**	2	5	**1**	8	7	**6**	**3**
5	**1**	**6**	4	3	7	9	**2**	**8**

ರಕ್ಷಿತಾ
ದ್ವಿತೀಯ ಬಿ.ಕಾಂ

ಕಲಾಮಂಜರಿ






ಶ್ರದ್ಧಾ
ತೃತೀಯ ಬಿಸಿಎ



ಅನ್ವಿತ ಡಿ. ಎನ್.
ತೃತೀಯ ಬಿ ಎ



ಸ್ಫೂರ್ತಿ
ದ್ವಿತೀಯ ವರ್ಷದ ಬಿ. ಟೆಕ್



ಭರತ್ ಜಿ
ದ್ವಿತೀಯ ಬಿಬಿಎ



ಮನೋಜ ಫೋಡಗೇರಿ
ಪ್ರಥಮ ವರ್ಷ ಬಿ. ಎ.